ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 29 ಜುಲೈ 25, 1982 ಬೆಲೆ 60 ಪೈಸೆ

ಹುತಾತ್ಮರಿಗೆ ಕೆಂಪು ವಂದನೆಗಳು

ಜುಲೈ ೨೧, ೧೯೮೦ ರಾಜ್ಯದ ಇತಿಹಾಸದಲ್ಲಿ ಮರೆಯಲಾಗದ ದಿನ. ರಾಜ್ಯದ ರೈತ ಸಮುದಾಯ ಸಿಡಿದೆದ್ದ ದಿನ. ಅಂದು, ಸಂಚಿತವಾಗಿ ಹೊಗೆ ಯಾಡುತ್ತಿದ್ದ ರೈತರ ಆಕ್ರೋಷ ನರಗುಂದದಲ್ಲಿ ಸ್ಫೋಟವಾಯಿತು. ಕಾಂಗ್ರೈ ಸರ್ಕಾರದ ರಕ್ತಪಿಪಾಸೆಗೆ ಕೆಲವು ಧೀರರು ಬಲಿಯಾದರು.

ಆ ಧೀರರು ಹುತಾತ್ಮರಾಗಿ ಒಂದು ವರ್ಷ ಕಳೆಯಿತು. ಕಾಂಗ್ರೈ ಆಡಳಿತಗಾರರ ರಕ್ತ ಪಿಪಾಸೆ ಹಿಂಗಿಲ್ಲ. ಇತ್ತೀಚೆಗೆ ತಾನೇ ಶಿವಮೊಗ್ಗ ಜಿಲ್ಲೆಯಲ್ಲಿ ಇಬ್ಬರು ರೈತ ಬಾಂಧವರು ಗುಂಡೇಟಿಗೆ ಬಲಿಯಾಗಿದ್ದಾರೆ. ಅಸಂತೃಪ್ತಿ ಹೊಗೆಯಾಡುತ್ತಿದೆ, ಬೆಳೆಯುತ್ತಿದೆ.

ಕಾಂಗ್ರೈ ಸರಕಾರದ ಭ್ರಷ್ಟ, ಜನದ್ರೋಹಿ ಸರಕಾರದ ವಿರುದ್ಧ ಜನಕೋಟಿ ಸಿಡಿದೇಳಬೇಕಾಗಿದೆ.

ಮಹಾನ್ ಉದ್ದೇಶಕ್ಕಾಗಿ ರಕ್ತ ತರ್ಪಣ ನೀಡಿದ ನರಗುಂದ-ನವಲಗುಂದ ರೈತ ಚಳುವಳಿಯ ಹುತಾತ್ಮರಿಗೆ, ಕೋಲಾರ, ಶಿವಮೊಗ್ಗ ಜಿಲ್ಲೆಯಲ್ಲಿ ಮಡಿದ ರೈತ ಬಾಂಧವರಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ತನ್ನ ಕೆಂಪು ವಂದನೆ ಸಲ್ಲಿಸುತ್ತದೆ.

ಸಂಸತ್ತಿನ ಘನಸ್ತಿಕೆಯನ್ನು ಕಡಿತಗೊಳಿಸುವ ದಾರಿಯಲ್ಲಿ...

ಇನ್ನೊಂದು ಹೆಜ್ಜೆ. ಇದೀಗ ತೈಲ ಖರೀದಿಯ ವಿಷಯದಲ್ಲಿ ನಡೆದ ಅವ್ಯವಹಾರ ಕುರಿತು ಸಾರ್ವಜನಿಕ ಉದ್ದಿಮೆ ಸಮಿತಿಯ ಪದಶಃ ವರದಿಯನ್ನು ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸಲು ನಿರಾಕರಿಸಲಾದ ಪ್ರಕರಣ.

ಈ ವರೆಗೆ ಸಂಸತ್ತಿನ ಉಭಯ ಸದನಗಳ ಅಧ್ಯಕ್ಷರುಗಳು ಅನುಸರಿಸುತ್ತಾ ಬಂದ ನಡವಳಿಕೆಗೂ, ಲಿಖಿತ ನಿಯಮಾವಳಿಗೂ ವಿರುದ್ಧವಾದ ನಿರ್ದೇಶನಗಳ ಮರೆಯಲ್ಲಿ ಭಾರತ ಸರಕಾರಕ್ಕೆ ತೈಲ ಖರೀದಿಯ ವಿಷಯದಲ್ಲಾದ ಕೋಟಿಗಟ್ಟಲೆ ನಷ್ಟ ಯಾರಿಂದಾಯಿತು ಎಂಬ ಸತ್ಯ ಸಂಗತಿಯು ಬಯಲು ಕಾಣದಂತಾಯಿತು. ಈ ಸಂಬಂಧ ಉಭಯ ಸದನಗಳ ಸದಸ್ಯರಿದ್ದ ಸಾರ್ವಜನಿಕ ಉದ್ದಿಮೆ ಸಮಿತಿ ನಡೆಸಿದ ಕೂಲಂಕುಷ ಪರಿಶೀಲನೆಯು ಕತ್ತಲೆಯಲ್ಲೇ ಇರುವಂತಾಯಿತು.

ಸಾರ್ವಜನಿಕ ಉದ್ದಿಮೆ ಸಮಿತಿಯ ಶಿಫಾರಸು ಮತ್ತು ಪದಶಃ ವರದಿಗಳೆರಡನ್ನೂ ಏಕಕಾಲದಲ್ಲಿ ಜೊತೆಯಾಗಿ ಸಂಸತ್ ಸದನಗಳಲ್ಲಿ ಮಂಡಿಸಬೇಕೆನ್ನುವ ಲಿಖಿತ ನಿಯಮವಿದ್ದರೂ ಸದನಗಳಲ್ಲಿ 'ತಿದ್ದಿದ ವರದಿ' ಮಂಡನೆಯಾದುದು ನಿಜಕ್ಕೂ ಖಂಡನೀಯ. ಈ ಬಗ್ಗೆ ಈ ವರದಿಯು ನಿಜ ಸಂಗತಿ

ಸಂಪಾದಕೀಯ

ಗಳನ್ನು ಬಚ್ಚಿಡುವಂತಾದ್ದು; ಇದು ಅಕ್ಷರಶಃ ವರದಿಯಲ್ಲವೆಂದು ಆ ಸಮಿತಿಯ ಸದಸ್ಯರಲ್ಲಿ ಅನೇಕರು ಬರಹ ಮೂಲಕ ಬರೆದು ಕೊಟ್ಟರೂ ಅವನ್ನೆಲ್ಲಾ ಕಡೆಗಣಿಸಿ ತೀರ್ಪು...

ಮುಖ್ಯವಾಗಿ ಈ ತೈಲ ವ್ಯವಹಾರಕ್ಕೆ ಸಂಬಂಧಪಟ್ಟ ಮುಖ್ಯ ಫೈಲೊಂದು ಪ್ರಧಾನಿಯ ಖಾಸಗಿ ಸಿಬ್ಬಂದಿಯವರೊಬ್ಬರು ಕೊಂಡೊಯ್ದು ದೀರ್ಘಕಾಲ ಅದನ್ನು 'ಸಮಿತಿ'ಯಿಂದ ಅಡಗಿಸಿಟ್ಟ ವಿಷಯದ ಸತ್ಯ ಸಂಗತಿ ಮತ್ತು ಸಂಬಂಧಪಟ್ಟ ಮಂತ್ರಿವರ್ಯರು ಸಂಬಂಧಪಟ್ಟ ಅಧಿಕಾರಿಗಳ ಶಿಫಾರಸುಗಳನ್ನೆಲ್ಲಾ ಕಾರಣವನ್ನೇನೂ ಕೊಡದೆ ಬದಿಗೊತ್ತಿ ವಿಪರೀತ ಅಧಿಕ ಕ್ರಯಕ್ಕೆ ತೈಲವನ್ನು ಖರೀದಿ ಮಾಡಲು ಮಾಡಿದ ಆಜ್ಞೆಯ ವಿಷಯ ಸತ್ಯ ಸಂಗತಿಗಳನ್ನು ವಿಮರ್ಶಿಸುವ ಉಭಯ ಸಂಸತ್ ಸದಸ್ಯರ ಅಧಿಕಾರವೇ ಕಸಿಯಲ್ಪಟ್ಟ ವಿಚಾರ ನಿಜಕ್ಕೂ ಅತ್ಯಂತ ಶೋಚನೀಯ.

(8ನೇ ಪುಟ ನೋಡಿ)

ಸಿಐಟಿಯು ಕಾರ್ಯಕಾರಿ ಸಮಿತಿ ಸಭೆ ಪ್ರಾರಂಭ

ಸೆಪ್ಟೆಂಬರ್ ೧ ರಂದು 'ಯುದ್ಧ ವಿರೋಧಿ ದಿನಾಚರಣೆ' ಆಚರಿಸಲು

ಕಾ॥ ಬಿ. ಟಿ. ಆರ್. ಕರೆ

ಬೆಂಗಳೂರು : ಜುಲೈ 23 :

ಸಾಮ್ರಾಜ್ಯಶಾಹಿ ಯುದ್ಧ ಪಿಪಾಸು ನೀತಿಯಿಂದಾಗಿ ಜಾಗತಿಕ ಶಾಂತಿಗೆ, ಮಾನವ ಕುಲದ ಅಸ್ತಿತ್ವಕ್ಕೆ ಗಂಡಾಂತರ ಒದಗಿದ್ದು, ಈ ನೀತಿಗೆ ಪ್ರತಿಭಟನೆ ಸೂಚಿಸಲು ಸೆಪ್ಟೆಂಬರ್ 1 ರಂದು ಡಬ್ಲ್ಯೂ ಎಫ್. ಟಿ. ಯು. ಕರೆಯ ಅನ್ವಯ ರಾಷ್ಟ್ರದಾದ್ಯಂತ 'ಯುದ್ಧ ವಿರೋಧಿ ದಿನಾಚರಣೆ' ಆಚರಿಸುವಂತೆ ಸಿ. ಐ. ಟಿ. ಯು. ಅಖಿಲ ಭಾರತ ಅಧ್ಯಕ್ಷ ಕಾಂ| ಬಿ. ಟಿ. ರಣದಿವೆ ಕರೆ ನೀಡಿದರು. ಅವರು ಬೆಂಗಳೂರಿನಲ್ಲಿ ಜುಲೈ 23 ರಿಂದ 25ರ ವರೆಗೆ ನಡೆಯುತ್ತಿರುವ ಅಖಿಲ ಭಾರತ ಸಿ. ಐ. ಟಿ. ಯು ಕಾರ್ಯಕಾರಿ ಸಮಿತಿಯನ್ನುದ್ದೇಶಿಸಿ ಮಾತನಾಡುತ್ತಿದರು.

ಜುಲೈ 23 ರಂದು ಕಾಂ| ಬಿ ಟಿ. ಆರ್. ಅವರು ಧ್ವಜಾರೋಹಣ ಮಾಡುವದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಆರಂಭದಲ್ಲಿ ಸ್ವಯಂ ಸೇವಕರ ಆಕರ್ಷಕ ಪಥಃಚಲನ (ಪರೇಡ್) ನಡೆದು ಕಾಂ| ಬಿ ಟಿ ಆರ್. ಗೌರವ ವಂದನೆ ಸ್ವೀಕರಿಸಿದರು.

ಆರಂಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಕಾಂ| ಸೂರ್ಯನಾರಾಯಣರಾವ್ ಅವರು, ಕಾರ್ಮಿಕ ವರ್ಗದ ಏಳ್ಗೆಗೋಸ್ಕರ ತಮ್ಮ ಜೀವನವನ್ನೇ ಮುಡಿಪಾಗಿಟ್ಟ, ಧೀಮಂತ ಹೋರಾಟಗಳ ನಾಯಕರುಗಳನ್ನು, ಕಾರ್ಯಕ್ರಮಕ್ಕೆ ಆಗಮಿಸಿದ ನಾನಾ ಕಾರ್ಮಿಕ ಸಂಘಗಳ ಮುಖಂಡರನ್ನು ಸ್ವಾಗತಿಸಿದರು.

ಮೇ 30, 1970ರಲ್ಲಿ ಪ್ರಾರಂಭವಾದ ಸಮರಶೀಲ ಸಂಘಟನೆಯಾದ ಸಿ.ಐ.ಟಿ.ಯು. ನೇತೃತ್ವದಲ್ಲಿ ದೇಶದಾದ್ಯಂತ ಕಾರ್ಮಿಕ ವರ್ಗ ನಡೆಸಿದ ಧೀರೋದಾತ್ತ ಹೋರಾಟಗಳನ್ನು ಕಾಂ| ಸೂರಿಯವರು ನೆನಪಿಗೆ ತಂದರು.

ಕರ್ನಾಟಕದಲ್ಲಿಯೂ ಸಹ ಇತ್ತೀಚಿನ ವರ್ಷಗಳಲ್ಲಿ ಕಾರ್ಮಿಕ ವರ್ಗ ಧೀರ ಹೋರಾಟಗಳನ್ನು ನಡೆಸಿದ್ದು, ರಾಷ್ಟ್ರದ ಕಾರ್ಮಿಕ ವರ್ಗ ನಡೆಸಿರುವ ಹೋರಾಟಗಳ ಮುಖ್ಯ ಪ್ರವಾಹದಲ್ಲಿ ರಾಜ್ಯದ ಕಾರ್ಮಿಕ ವರ್ಗವೂ ಪಾಲ್ಗೊಂಡಿದೆಯೆಂದು ಕಾಂ| ಸೂರಿ ತಿಳಿಸಿದರು. ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರ ಮುಷ್ಕರ, ಬಹುರಾಷ್ಟ್ರೀಯ ಕಂಪನಿಗಳಾದ ಮೈಕೋ, ಐ.ಟಿ.ಸಿ.ಗಳ ಕಾರ್ಮಿಕರು ನಡೆಸಿದ ದೀರ್ಘ ಹೋರಾಟಗಳನ್ನು ಉದಹರಿಸಿದರು.

1980ರಿಂದ ಇಲ್ಲಿಯವರೆಗೆ ಗುಂಡೂರಾಯರ ನೇತೃತ್ವದ ಕಾಂಗ್ರೈ ಸರ್ಕಾರದ ದುರಾಡಳಿತದಲ್ಲಿ ವಿರೋಧಿಸಿ ನಡೆದ ನಾನಾ ಹೋರಾಟಗಳಲ್ಲಿ ಸುಮಾರು 70 ಜನ ಮೃತರಾದವರನ್ನು ಎತ್ತಿ ತೋರಿಸಿದ ಕಾಂ| ಸೂರಿಯವರು ಜನದ್ರೋಹಿ ಕಾಂಗ್ರೈ ಸರಕಾರದ ವಿರುದ್ಧದ ಹೋರಾಟಗಳಲ್ಲಿ ಕಾರ್ಮಿಕವರ್ಗ ಮುಂಚೂಣಿಯಲ್ಲಿದೆಯೆಂದು ಹೆಮ್ಮೆಯಿಂದ ತಿಳಿಸಿದರು. (8ನೇ ಪುಟ ನೋಡಿ)

ಮುಂಬೈ :

ಗಿರಣಿ ಕಾರ್ಮಿಕರ ಮುಷ್ಕರಕ್ಕೆ ಆರು ತಿಂಗಳಾಯಿತು

ಮುಂಬಯಿಯ 60 ಜವಳಿ ಗಿರಣಿಗಳ ಎರಡೂವರೆ ಲಕ್ಷ ಕಾರ್ಮಿಕರು ಮುಷ್ಕರ ಆರಂಭಿಸಿ ಜುಲೈ 18ಕ್ಕೆ ಆರು ತಿಂಗಳು ಕಳೆಯಿತು. ಮುಷ್ಕರವನ್ನು ನಿರ್ಲಕ್ಷಿಸಿದರೆ ಕಾರ್ಮಿಕರು ಒಂದೆರಡು ತಿಂಗಳಲ್ಲಿ ದಾರಿಕಾಣದೆ ಗಿರಣಿಗಳಿಗೆ ಮರಳುತ್ತಾರೆ ಎಂಬ ಮಹಾರಾಷ್ಟ್ರ ಹಾಗೂ ಕೇಂದ್ರ ಸರ್ಕಾರಗಳ ನಿರೀಕ್ಷೆ ಸಂಪೂರ್ಣ ಸುಳ್ಳಾಗಿದೆ. ಮುಷ್ಕರಕಾರರು ಇನ್ನಷ್ಟು ಹುಮ್ಮಸ್ಸಿನಿಂದ ಮುಷ್ಕರ ಮುಂದುವರೆಸುತ್ತಿದ್ದಾರೆ.

ಜುಲೈ 8 ರಂದು 172ನೇ ದಿನ ಪ್ರವೇಶಿಸಿದ ಈ ಮುಷ್ಕರ ಅಂದು ಭಾರತದ ಜವಳಿ ಕಾರ್ಮಿಕರ ಮುಷ್ಕರದ ಇತಿಹಾಸದಲ್ಲಿ ಅತೀ ದೀರ್ಘ ಮುಷ್ಕರದ ದಾಖಲೆ ಸ್ಥಾಪಿಸಿತು. ಈ ಹಿಂದಿನ ಚಾರಿತ್ರಿಕ ದಾಖಲೆ 1928ರಲ್ಲಿ ನಡೆದ 171 ದಿನಗಳ ಮುಷ್ಕರ. 54 ವರ್ಷಗಳ ಹಿಂದಿನ ಬ್ರಿಟಿಷ್ ವಸಾಹತುಶಾಹೀ ಪಾತಕಿಗಳನ್ನು ಈಗಿನ ಕಾಂಗ್ರೆಸ್ (ಐ) ಆಳರಸರು ಮೀರಿಸುತ್ತಿದ್ದಾರೆ!

ಜುಲೈ 8ರ ಈ ಚಾರಿತ್ರಿಕ ದಿನದಂದು ಮಹಾರಾಷ್ಟ್ರದಾದ್ಯಂತ ಪ್ರತಿಭಟನಾ ಕಾರ್ಯಕ್ರಮಗಳು ನಡೆದವು. ಮುಂಬೈ ಬಿಟ್ಟು ಮಹಾರಾಷ್ಟ್ರದ ಉಳಿದ 40 ಬಟ್ಟೆ ಗಿರಣಿಗಳಲ್ಲಿನ ಒಂದೂವರೆ ಲಕ್ಷ ಕಾರ್ಮಿಕರು ತಮ್ಮ ಮುಂಬೈ ಸಂಗಾತಿಗಳಿಗೆ ಬೆಂಬಲವಾಗಿ ಒಂದು ದಿನದ ಮುಷ್ಕರ ನಡೆಸಿ ಪಾತಕಿ ಸರಕಾರವನ್ನು ಬಡಿದೆಬ್ಬಿಸಿದರು. ಇದರ ಮೊದಲು ಮಹಾರಾಷ್ಟ್ರದ ಸುಮಾರಾಗಿ ಎಲ್ಲಾ ಸಣ್ಣ ದೊಡ್ಡ ಪಟ್ಟಣಗಳಲ್ಲಿ ಬೃಹತ್ ಸಾರ್ವಜನಿಕ ಸಭೆಗಳು ನಡೆದವು.

ಜುಲೈ 8 ರಂದು ಮುಂಬೈಯಲ್ಲಿನ ಇನ್ನೊಂದು ಮಹತ್ವದ ಘಟನೆಯೆಂದರೆ ಕಾರ್ಮಿಕ ಸಂಘಗಳ ಜಂಟೀ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ಶಿವಾಜಿ ಪಾರ್ಕಿನಲ್ಲಿ ನಡೆದ ಬೃಹತ್ ಪ್ರತಿಭಟನಾ ಸಭೆ. ಒಂದು ಲಕ್ಷಕ್ಕೂ ಮಿಕ್ಕಿ ಜನತೆ ಇದರಲ್ಲಿ ಭಾಗವಹಿಸಿತು. ಮುಷ್ಕರನಿರತ ಕಾರ್ಮಿಕರ ಮುಖಂಡರೊಂದಿಗೆ ಮಾತುಕತೆ ನಡೆಸಬೇಕು, ಬೇಡಿಕೆಗಳನ್ನು ಈಡೇರಿಸಬೇಕು, ಜುಲೈ 18ರೊಳಗೆ ಏನೂ ಇತ್ಯರ್ಥವಾಗದಿದ್ದರೆ 'ಜೇಲ್ ಭರೋ' ಕಾರ್ಯಕ್ರಮ ನಡೆಸಬೇಕು ಎಂದು ಸಭೆ ಕರೆ ನೀಡಿತು. ಸಂಸತ್ತಿನಲ್ಲಿ ಮಂಡಿಸಬೇಕೆಂದಿರುವ ಕಾರ್ಮಿಕ ವಿರೋಧೀ ಕರಾಳ ಮಸೂದೆಗಳನ್ನು ಬಲವಾಗಿ ಖಂಡಿಸಲಾಯಿತು.

ಜುಲೈ ತಿಂಗಳಲ್ಲೇ ಮುಂಬೈಯ ಎಲ್ಲಾ ವಿಭಾಗಗಳಿಂದ ಬಂದ ಐದು ಸಾವಿರಕ್ಕೂ ಮೀರಿದ ಮಹಿಳೆಯರು ಒಂದು ಬೃಹತ್ ಮೆರವಣಿಗೆ ತೆಗೆದರು. ಇದರಲ್ಲಿ ಗಿರಣಿಗಳಲ್ಲಿ ದುಡಿಯುವ ಮಹಿಳೆಯರಲ್ಲದೆ, ಇತರ ಕೈಗಾರಿಕೆಗಳ ಮಹಿಳಾ ಕಾರ್ಮಿಕರು, ಆಫೀಸುಗಳಲ್ಲಿ ದುಡಿಯುವ ಮಹಿಳೆಯರು, ಗುಡಿಸಲು ನಿವಾಸಿ ಮಹಿಳೆಯರು ಹೀಗೆ ಎಲ್ಲರೂ ಭಾಗವಹಿಸಿದ್ದರು. ಮುಂಬೈ ಮಿಲ್ ಮಾಲೀಕರ ಸಂಘದ ಕಚೇರಿಯೆದುರು ಖಾಲೀಕೊಡ, ಖಾಲೀ ತಟ್ಟೆಗಳನ್ನು ಬಾರಿಸಿ ಪ್ರದರ್ಶನ ನಡೆಸಿದರು. ಮಹಿಳೆಯರ ಈ ಧೀರ ಸಮರಶೀಲತೆ ಕಂಡ ಮಿಲ್ ಮಾಲೀಕರು ಕಚೇರಿಯ ಎಲ್ಲಾ ಕಿಟಕಿ ಬಾಗಿಲುಗಳನ್ನು ಮುಚ್ಚಿಕೊಂಡರು. ಮೆರವಣಿಗೆ ಮುಂದುವರಿದು ರಾಜ್ಯದ ರಾಜಕೀಯ ಅಧಿಕಾರದ ಕೇಂದ್ರವಾದ ಮಂತ್ರಾಲಯದೆದುರು ಬೃಹತ್ ಸಭೆಯಾಗಿ ಪರಿಣಮಿಸಿತು.

ವೇತನ ಪರಿಷ್ಕರಣ, ಮನೆ ಬಾಡಿಗೆ ಭತ್ಯೆಯ ಹೆಚ್ಚಳ ಇತ್ಯಾದಿ ಈ ಮುಷ್ಕರದ ಬೇಡಿಕೆಗಳ ನ್ಯಾಯಬದ್ಧತೆಯನ್ನು ಪ್ರಶ್ನಿಸುವ ಧೈರ್ಯ ಸರಕಾರಕ್ಕೂ ಇಲ್ಲ. ಕೇವಲ ತನ್ನ ಚಮಚಾ ಇಂಟಕ್ ಯೂನಿಯನ್ನನ್ನು ಈ ಕೈಗಾರಿಕೆಯಲ್ಲಿ ಉಳಿಸಿಕೊಳ್ಳಬೇಕೆಂಬ ಸರಕಾರದ ಹಠಮಾರಿತನದಿಂದಾಗಿ ಆರು ತಿಂಗಳಾದರೂ ಇತ್ಯರ್ಥ ಕಾಣದೆ ಮುಷ್ಕರ ಮುಂದುವರಿಯುತ್ತಿರುವುದು. ದಿನಬೆಳಗಾದರೆ 'ಉತ್ಪಾದನಾ ವರ್ಷ'ದ ರಾಗ ಅರಚುವ ಸರಕಾರಕ್ಕೆ ಬಡ ಕಾರ್ಮಿಕರ ನ್ಯಾಯಬದ್ಧ ಬೇಡಿಕೆಗಳ ಬಗ್ಗೆ ಮುಷ್ಕರದ ನಾಯಕರೊಂದಿಗೆ ಚರ್ಚಿಸಿ ಅನ್ಯಾಯವಾಗಿ ಕೋಟಿಗಟ್ಟಲೆ ಹಣ, ರಫ್ತು ನಷ್ಟವಾಗುವುದನ್ನು ತಪ್ಪಿಸೋಣ ಎಂದು ಇದುವರೆಗೂ ಅನಿಸಿಲ್ಲ. ಏಕಾದರೂ ಅನಿಸೀತು ?

ಮುಷ್ಕರಕಾರರ ವಿರುದ್ಧ ಅಪಪ್ರಚಾರ ನಡೆಸಲು ತನ್ನೆಲ್ಲಾ ಪ್ರಚಾರ ಯಂತ್ರ ಬಳಸುತ್ತಿರುವ ಸರಕಾರ "ಇದರ ಅಗತ್ಯವಿತ್ತೇ" ಎಂಬ ಹೆಸರಿನಲ್ಲಿ ಒಂದು ವಾರ್ತಾಚಿತ್ರ ಪ್ರದರ್ಶಿಸುತ್ತಿದೆ. ಎಲ್ಲಾ ಕಾರ್ಮಿಕ ಸಂಘಟನೆಗಳೂ, ದೇಶ ಪ್ರೇಮಿಗಳೂ, ಜನಸಾಮಾನ್ಯರೂ ಇದೇ ಪ್ರಶ್ನೆ ಕೇಳುತ್ತಿದ್ದೇವೆ. ತಮ್ಮ ಪೋಷಕರಾದ ಕೈಗಾರಿಕೋದ್ಯಮಿಗಳ ಹಣದ ಚೀಲ ಬಿರಿದುಹೋಗುವಷ್ಟು ತುಂಬಿಸಬೇಕು, ಲಾಭಬಡುಕ ವಿದೇಶೀ ಗುತ್ತೇದಾರಿ ಬಂಡವಾಳಶಾಹಿಗಳನ್ನು ಹೇಗಾದರೂ ತೃಪ್ತಿಪಡಿಸಬೇಕು, ಈ ಶೋಷಣೆಯ ವಿರುದ್ಧ ಕಾರ್ಮಿಕರು ಸೊಲ್ಲೆತ್ತಿದರೆ ಅವರ ತಲೆಯ ಮೇಲೆ ಚಮಚಾ ಯೂನಿಯನ್‌ನನ್ನು ಹೊರಿಸಿ ಅವರ ಬಾಯಿಮುಚ್ಚಿಸಬೇಕೆಂದು ಸರಕಾರ ಪಟ್ಟು ಹಿಡಿಯದಿರುತ್ತಿದ್ದರೆ ಈ ಮುಷ್ಕರ ಇಷ್ಟು ದೀರ್ಘಕಾಲ ನಡೆಯುವ ಅಗತ್ಯವಿತ್ತೇ ಎಂದು ನಾವೆಲ್ಲಾ ಕೇಳುತ್ತಿದ್ದೇವೆ. ಮುಂಬೈಯ ಗಿರಣಿ ಕಾರ್ಮಿಕರ ಮುಷ್ಕರ ಈಗ ಕೇವಲ ಕೆಲವು ಆರ್ಥಿಕ ಬೇಡಿಕೆಗಳ ಹೋರಾಟವಾಗಿ ಉಳಿಯದೆ ಭಾರತದ ಕಾರ್ಮಿಕ ವರ್ಗದ ಸಂಘಟನೆಯ ಹಕ್ಕು ಉಳಿಸಿಕೊಳ್ಳುವ ಹೋರಾಟವಾಗಿದೆ; ಆಳುವ ಪಕ್ಷದ ಸರ್ವಾಧಿಕಾರೀ ಪ್ರವೃತ್ತಿಯ ವಿರುದ್ಧ ಕಾರ್ಮಿಕ ವರ್ಗದ ಹೋರಾಟವಾಗಿಬಿಟ್ಟಿದೆ.

ಸಿ.ಐ ಟಿ ಯು.ವಿನ ಸಂದರ್ಭೋಚಿತ ನೆರವು

ಮುಂಬೈಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿ.ಐ.ಟಿ.ಯು.ವಿನ ಎಲ್ಲಾ ಘಟಕಗಳು ಹಾಗೂ ಇತರ ಕಾರ್ಮಿಕ ಸಂಘಟನೆಗಳು ಹಣ, ಧಾನ್ಯ ಸಂಗ್ರಹಿಸಿ ಗಿರಣಿ ಕಾರ್ಮಿಕರ ಕಾಲೋನಿಗಳಲ್ಲಿ ಹಂಚುತ್ತಿದ್ದಾರೆ. ಗಿರಣಿ ಕಾರ್ಮಿಕರ ಮಕ್ಕಳಿಗೆ ಪುಕ್ಕಟೆ ನೋಟುಬುಕ್ಕುಗಳನ್ನು ಹಂಚುತ್ತಿದ್ದಾರೆ. ಎಸ್. ಎಫ್. ಐ. ಘಟಕಗಳು ಎಲ್ಲಾ ಶಾಲಾ ಕಾಲೇಜುಗಳೆದುರು ಗಿರಣಿ ಕಾರ್ಮಿಕರ ಮಕ್ಕಳಿಗೆ ಎಲ್ಲಾ ರೀತಿಯ ನೆರವು ಸಂಗ್ರಹಿಸುತ್ತಿದ್ದಾರೆ.

●

ಮುದ್ರಣ ಕೈಗಾರಿಕೆಯಲ್ಲಿ ಗಣಕೀಕರಣ ಕೈಗೊಳ್ಳುವುದನ್ನು ನಿಷೇಧಿಸಬೇಕು --- ಪ್ರೆಸ್ ಕಾರ್ಮಿಕರ ಒತ್ತಾಯ

ಮುಂಬಯಿ, ಕಲ್ಕತ್ತ ಮತ್ತು ದೆಹಲಿಯಂಥ ಮಹಾನಗರಗಳಲ್ಲಿ ಕಂಪ್ಯೂಟರ್-ಚಾಲಿತ, ಫೋಟೋ ಟೈಪ್ ಸೆಟ್ಟಿಂಗ್ ಮುದ್ರಣ ಯಂತ್ರಗಳು ಈಗಾಗಲೇ ಚಾಲ್ತಿಯಲ್ಲಿದ್ದು, ಈ ಯಂತ್ರಗಳಿಂದ ಸುಮಾರು 1000 ಕಾರ್ಮಿಕರು ಮಾಡುವ ಕೆಲಸಕ್ಕೆ 100 ಕಾರ್ಮಿಕರು ಸಾಕಾಗುತ್ತದೆ. ಮೊದಲೇ ಭೀಕರವಾಗುತ್ತಿರುವ ನಿರುದ್ಯೋಗದಂಥಹ ಸಮಸ್ಯೆಯು ಈ ರೀತಿಯ ಯಂತ್ರಗಳ ಉಪಯೋಗದಿಂದಾಗಿ ಮತ್ತಷ್ಟು ತೀವ್ರವಾಗುತ್ತಿದೆ. ಕಾರಣ ಈ ರೀತಿಯ ಯಂತ್ರಗಳ ಬಳಕೆಯನ್ನು ಸರಕಾರ ನಿಷೇಧಿಸಬೇಕೆಂದು 18-7-82 ರಂದು ಮಂಗಳೂರಿನಲ್ಲಿ ಸೇರಿದ ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ ಯು)ನ 45ನೇ ವಾರ್ಷಿಕ ಮಹಾಸಭೆಯಲ್ಲಿ ಸರಕಾರವನ್ನು ಒತ್ತಾಯಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕಾಂ| ಪಿ. ರಾಮಚಂದ್ರ ರಾವ್‌ರವರು ವಹಿಸಿದ್ದರು. ಆರಂಭದಲ್ಲಿ ಸಂಘದ ಉಪಾಧ್ಯಕ್ಷರಾದ ಕಾಂ| ಬಿ. ಉಮಾನಾಥ ಅವರು ಸ್ವಾಗತಿಸಿದರು. ನಂತರ ಅಗಲಿದ ಕಾರ್ಮಿಕ ನಾಯಕರುಗಳಿಗೆ, ಸಂಘದ ಸದಸ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಂತರ ಕಾರ್ಯದರ್ಶಿ ಭುಜಂಗ ಮಾರ್ಲರು ಮಂಡಿಸಿದ ವಾರ್ಷಿಕ ವರದಿಯನ್ನು, ಕೋಶಾಧಿಕಾರಿ ಜನಾರ್ಧನ್ ಮಂಡಿಸಿದ ವಾರ್ಷಿಕ ಲೆಕ್ಕ ಪತ್ರವನ್ನು ಸಭೆಯು ಅಂಗೀಕರಿಸಿತು

ಸಭೆಯು ಕೆಳಕಂಡ ಠರಾವುಗಳನ್ನು ಅಂಗೀಕರಿಸಿತು.

(1) ಕಾರ್ಮಿಕ ಇಲಾಖೆಯಲ್ಲಿ ಬೇಕಾದ ಅಧಿಕಾರಿಗಳನ್ನು ಹಾಗೂ ಸಿಬ್ಬಂದಿಗಳನ್ನು ತಕ್ಷಣ ನೇಮಿಸಬೇಕು.

(2) ಇ.ಎಸ್.ಐ.ನಲ್ಲಿಯ ಅವ್ಯವಸ್ಥೆಯನ್ನು ಸರಿಪಡಿಸಬೇಕು.

(3) ರೂ. 1000ದವರೆಗೆ ಮಾಸಿಕ ವೇತನ ಪಡೆಯುವವರಿಗೆ ಆದಾಯ ತೆರಿಗೆ ರದ್ದಾಗಬೇಕು.

(4) 8-7-82 ರಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಸತ್ಯಾಗ್ರಹ ನಡೆಸುತ್ತಿರುವ ಸ್ಥಳೀಯ ಅಭ್ಯರ್ಥಿಗಳ ಕೇಳಿಕೆಯನ್ನು ಸರಕಾರ ಇತ್ಯರ್ಥಗೊಳಿಸಬೇಕು.

(5) ಮುದ್ರಣಾಲಯಗಳಲ್ಲಿ ಕೆಲಸ ಮಾಡುವಾಗ ಕಂಪೋಸಿಟರ್‌ರಿಗೆ ಕುಳಿತುಕೊಳ್ಳಲು ಸ್ಟೂಲ್ ಒದಗಿಸಬೇಕು.

(6) ಆಡಳಿತ ವರ್ಗಗಳು ಮುದ್ರಣ ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ ಒದಗಿಸಬೇಕು.

(7) ಕಳೆದ ಆರು ತಿಂಗಳಿಂದ ಮುಷ್ಕರ ನಿರತ ಮುಂಬೈನ ಹತ್ತಿ ಗಿರಣಿ ಕಾರ್ಮಿಕರ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು...ಇತ್ಯಾದಿ.

ಯೂನಿಯನ್ ಪದಾಧಿಕಾರಿಗಳಾಗಿ ಈ ಕೆಳಕಂಡವರು ಆಯ್ಕೆಯಾಗಿದ್ದಾರೆ:

ಅಧ್ಯಕ್ಷರಾಗಿ ಕಾಂ| ಪಿ. ರಾಮಚಂದ್ರರಾವ್, ಉಪಾಧ್ಯಕ್ಷರುಗಳಾಗಿ ಕಾಂ| ಕೆ. ಮೂಸಬ್ಬ, ಯು. ಪಿ. ಡಿಸೋಜ ಮತ್ತು ಕಾಂ| ಬಿ. ಉಮಾನಾಥ, ಕಾರ್ಯದರ್ಶಿಯಾಗಿ ಬಿ. ಭುಜಂಗ ಮಾರ್ಲ, ಜೊತೆ ಕಾರ್ಯದರ್ಶಿಗಳಾಗಿ ಕೆ. ಮಂಜುನಾಥ, ಸದಾಶಿವಶೆಟ್ಟಿ ಮತ್ತು ವಸಂತ, ಕೋಶಾಧಿಕಾರಿಯಾಗಿ ಶೀನಪ್ಪ ಅಂಚನ್ ಇವರುಗಳನ್ನು ಪದಾಧಿಕಾರಿಗಳಾಗಿಯೂ ಮತ್ತು 36 ಕಾರ್ಯಕಾರಿ ಸದಸ್ಯರನ್ನೂ ಚುನಾಯಿಸಲಾಗಿದೆ.

ನಂತರ ಸಭಿಕರ ಪರವಾಗಿ ನಾರಾಯಣಶೆಟ್ಟಿ, ಸುಬ್ರಾಯ ನಾಯಕ, ಯು ಪಿ.ಡಿ'ಸೋಜ ಮತ್ತು ಅತಿಥಿಗಳಾಗಿ ಆಗಮಿಸಿದ ಸಿ. ಪಿ. ಐ. (ಎಂ) ಜಿಲ್ಲಾ ಕಾರ್ಯದರ್ಶಿ ಕೆ. ಆರ್. ಶ್ರೀಯಾನ್, ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಕಾಂ| ಕೆ. ಮೂಸಬ್ಬ, ನಾರಾಯಣ ಪೈ, ಕು ಮ ಲಾ ಕ್ಷ ಬಂಗೇರ ಮೊದಲಾದವರು ಮಾತನಾಡಿದರು.

ಕೊನೆಯಲ್ಲಿ ಅಧ್ಯಕ್ಷ ಸ್ಥಾನದಿಂದ ಕಾಂ| ಪಿ. ರಾಮಚಂದ್ರರಾವ್ ಮಾತನಾಡಿದರು. ಕೆ. ಮಂಜುನಾಥ ವಂದಿಸಿದರು.

●

ಆದಿವಾಸಿ ವಿರೋಧಿ ಮಸೂದೆ

–ಜೀವನ್‌ಲಾಲ್ ಜೈರಾಮ್‌ದಾಸ್

1927ರ ಭಾರತೀಯ ಅರಣ್ಯ ಶಾಸನಕ್ಕೆ ಬದಲಾಗಿ ಹೊಸ ಮಸೂದೆಯನ್ನು ಭಾರತ ಸರ್ಕಾರ ಸಿದ್ಧಪಡಿಸಿದೆ. 1935ರ ಭಾರತ ಸರ್ಕಾರ ಕಾಯ್ದೆಯ ಪ್ರಕಾರ ಅರಣ್ಯಗಳು ರಾಜ್ಯಗಳ ಪಟ್ಟಿಯಲ್ಲಿದ್ದವು. ಅರಣ್ಯಗಳ ಮೇಲಿನ ರಾಜ್ಯಗಳ ಅಧಿಕಾರವನ್ನು ಸಂವಿಧಾನದಲ್ಲಿಯೂ ಒಪ್ಪಿಕೊಳ್ಳಲಾಗಿತ್ತು. ತುರ್ತುಪರಿಸ್ಥಿತಿಯ ಕಾಲದಲ್ಲಿ ಮತ್ತು 1980ರಲ್ಲಿ ಇಂದಿರಾ ಮತ್ತೊಮ್ಮೆ ಅಧಿಕಾರಕ್ಕೆ ಬಂದ ಮೇಲೆ ಅರಣ್ಯಗಳ ಮೇಲಿನ ರಾಜ್ಯಗಳ ಅಧಿಕಾರವನ್ನು ತೀವ್ರವಾಗಿ ಮೊಟಕುಗೊಳಿಸಲಾಯ್ತು. ಎಲ್ಲ ರಾಜ್ಯಗಳು ಏಕ ಕಾಲದಲ್ಲಿ ಈ ಮಸೂದೆಯ ವ್ಯಾಪ್ತಿಗೆ ಒಳಪಡುವುದರಿಂದ ಇದಕ್ಕೆ ಹೆಚ್ಚಿನ ಮಹತ್ವ ಉಂಟಾಗಿದೆ.

1865ಕ್ಕಿಂತ ಹಿಂದೆ ಅರಣ್ಯ ಉತ್ಪತ್ತಿಗಳ ಮೇಲೆ ಆದಿವಾಸಿ ಮತ್ತು ವನವಾಸಿಗಳಿಗೆ ಸಂಪೂರ್ಣ ಹಕ್ಕಿತ್ತು. ಅವರು ಅದರ ಒಡೆಯರೇ ಆಗಿದ್ದರೆನ್ನಬಹುದು. ತಾವು ಅರಣ್ಯದೊಂದಿಗೇ ವಿಲೀನವಾಗಿದ್ದೇವೆ ಎನ್ನುವಷ್ಟರ ಮಟ್ಟಿಗೆ ಅವರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಜೀವನ ಅರಣ್ಯದ ಸುತ್ತ ಕೇಂದ್ರೀಕೃತವಾಗಿತ್ತು. ಅರಣ್ಯ ಸಂಪತ್ತನ್ನು ವಾಣಿಜ್ಯ ವಸ್ತುವನ್ನಾಗಿ ಬಳಸಿಕೊಳ್ಳಲು ಆಂಗ್ಲರು ಶುರುಮಾಡಿದರು. 1865ರಲ್ಲಿ ಯಾವುದೇ ನೆಲವನ್ನು ಅರಣ್ಯ ನೆಲವೆಂದು ಘೋಷಿಸಲು ಸರ್ಕಾರ ಅಧಿಕಾರ ಪಡೆದುಕೊಂಡಿತು. 1878ರ ಭಾರತೀಯ ಅರಣ್ಯ ಕಾಯಿದೆಯು ಕಾಡುಗಳನ್ನು ಮೀಸಲಾತಿ ಕಾಡುಗಳು, ಅಭಯಾರಣ್ಯಗಳು ಮತ್ತು ಹಳ್ಳಿ ಕಾಡುಗಳು ಎಂದು ವಿಭಾಗಿಸಿತು. ಅರಣ್ಯಾಧಿಕಾರಿಗಳಿಗೆ ಮೊದಲ ಬಾರಿಗೆ ಹೆಚ್ಚಿನ ಅಧಿಕಾರ ಕೊಡಲಾಯಿತು.

50 ವರ್ಷಗಳ ನಂತರ 1927ರಲ್ಲಿ ಆದಿವಾಸಿಗಳಿಗೆ ಅರಣ್ಯ ಉತ್ಪತ್ತಿಯ ಮೇಲಿರುವ ಹಕ್ಕನ್ನು ಕಿತ್ತುಕೊಳ್ಳಲಾರಂಭಿಸಲಾಯಿತು. ಅರಣ್ಯಗಳ ಮೇಲೆ ಸರ್ಕಾರ ಹೆಚ್ಚಿನ ಅಧಿಕಾರ ಪಡೆಯಿತು. ಅರಣ್ಯ ಮತ್ತು ಪೋಲೀಸ್ ಖಾತೆಗಳಿಗೆ ವಿಪರೀತ ಅಧಿಕಾರ ನೀಡಲಾಯಿತು.

ಆದಿವಾಸಿಗಳ ಜನಜೀವನವನ್ನು ಉತ್ತಮಗೊಳಿಸುವುದರ ಬದಲು ಈ ಮಸೂದೆ ಅವರ ಜೀವನವನ್ನು ಇನ್ನೂ ದುರ್ಬಲಗೊಳಿಸುವಂತೆ ಮಾಡುತ್ತದೆ. ವಾಣಿಜ್ಯ ಹಿತಾಸಕ್ತಿಯನ್ನೇ ಮುಖ್ಯವಾಗಿವುಳ್ಳ ಈ ಮಸೂದೆ ಅರಣ್ಯಗಳ ಬಗೆಗಿನ ಸಾಮಾಜಿಕ ನಿಲುವನ್ನು ವ್ಯಕ್ತಪಡಿಸುವುದಿಲ್ಲ.

ಈ ಮಸೂದೆಯನ್ನು ಪರಿಶೀಲಿಸಿದಾಗ ಅರಣ್ಯವಾಸಿಗಳು ಕಾಡುಗಳ ಶತ್ರುಗಳು ಎಂಬ ಭಾವನೆಯನ್ನು ಇರಿಸಿಕೊಂಡಿದೆ ಎಂದು ಎದ್ದು ಕಾಣುತ್ತದೆ. "ಅರಣ್ಯಗಳ ಮೇಲಿನ ಪ್ರಭುತ್ವದ ಗುತ್ತೇದಾರಿ" ಎಂದು ಒಬ್ಬ ಅರ್ಥಶಾಸ್ತ್ರಜ್ಞ ಈ ಮಸೂದೆಯನ್ನು ಸರಿಯಾಗಿಯೇ ವರ್ಣಿಸಿದ್ದಾನೆ.

ಈ ಕಾಯಿದೆಯ ಸಂಕ್ಷಿಪ್ತ ಪರಿಚಯ :

ಈ ಮಸೂದೆಯ ನಾಲ್ಕನೆಯ ವಿಧಿಯ ಪ್ರಕಾರ ಯಾವುದೇ ನೆಲವನ್ನು ಮೀಸಲಾತಿ ಅರಣ್ಯವೆಂದು ಘೋಷಿಸಬಹುದು. 6ನೆಯ ವಿಧಿಯು ಕೋರ್ಟುಗಳ ವ್ಯಾಪ್ತಿಯನ್ನು ತೆಗೆದು ಹಾಕುತ್ತದೆ. ಅರಣ್ಯಾಧಿಕಾರಿಗೆ ಸಿವಿಲ್ ನ್ಯಾಯಾಲಯಗಳ ಅಧಿಕಾರ ನೀಡಲಾಗಿದೆ. ಅರಣ್ಯವಾಸಿಗಳ ಏಕೈಕ ಆಸರೆಯಾಗಿರುವ ಅರಣ್ಯ ಉತ್ಪತ್ತಿಗಳನ್ನು ಬಳಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಈ ಅರಣ್ಯ ಉತ್ಪತ್ತಿಗಳ ದೊಡ್ಡ ಪಟ್ಟಿ ಸೇರಿಸಲಾಗಿದೆ. ಅಂಟು, ಅನೇಕ ವಿಧದ ಹೂವು, ಹಣ್ಣು ಮತ್ತು ಎಲೆಗಳು, ಹುಲ್ಲು, ಜೇನು ಇವೆಲ್ಲವನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿದೆ. 30ನೆ ವಿಧಿಯ ಪ್ರಕಾರ ಮೀಸಲಾತಿ ಕಾಡುಗಳಿಗೆ ಅರಣ್ಯ ವಾಸಿಗಳು ಪ್ರವೇಶಿಸುವುದನ್ನು ನಿರ್ಬಂಧಿಸಲಾಗಿದೆ. ಪಶುಗಳ ಮೇಯುವಿಕೆಯನ್ನು ಅಪರಾಧವೆಂದು ಪರಿಗಣಿಸಲಾಗುತ್ತದೆ.

ಅಪರಾಧಿ ಎಂದು ಕಂಡು ಬಂದವರಿಗೆ ಮೂರು ತಿಂಗಳಿಂದ ಮೂರು ವರ್ಷಗಳವರೆಗಿನ ಸಜೆ, 500 ರಿಂದ 5,000 ರೂಪಾಯಿವರೆಗಿನ ದಂಡ ವಿಧಿಸಲಾಗುತ್ತದೆ. ಸಣ್ಣ ಪುಟ್ಟ ಅಪರಾಧಗಳಿಗೆ ಒಂದು ವರ್ಷ ಸಜೆ, 1,000 ರೂ. ದಂಡ, ಅರಣ್ಯಗಳನ್ನು ಸರ್ಕಾರದ ಆಸ್ತಿ ಎಂದು ಪರಿಗಣಿಸಿದರೆ ಕೋರ್ಟುಗಳಲ್ಲಿ ಪ್ರಶ್ನಿಸುವಂತಿಲ್ಲ.

ಅತ್ಯಂತ ಹಾನಿಗೀಡಾದವರು :

ಅರಣ್ಯಗಳಿಲ್ಲದ ತಮ್ಮ ಜೀವನವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ ಎಂದು ಆದಿವಾಸಿಗಳು ಹೇಳುವುದರಲ್ಲಿ ತಪ್ಪಿಲ್ಲ. 367 ಲಕ್ಷ ಆದಿ ವಾಸಿಗಳು ಹಳ್ಳಿಗಳಲ್ಲಿ ಅದರಲ್ಲೂ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಾರೆ. (1971ರ ಜನಗಣತಿ, ಒಟ್ಟು ಆದಿವಾಸಿಗಳ ಸಂಖ್ಯೆ 380 ಲಕ್ಷ). ಗುಜರಾತಿನಲ್ಲಿ ಶೇಕಡಾ 94 ಹಳ್ಳಿಗಾಡಿನಲ್ಲಿದ್ದಾರೆ. ಇವರಲ್ಲಿ ಅಕ್ಷರತೆಯ ಮಟ್ಟ ಕೇವಲ ಶೇಕಡಾ 14. ಹಾಗಾಗಿ ಹೆಚ್ಚಿನವರು ವ್ಯವಸಾಯಗಾರರು, ಕೂಲಿ ಕಾರ್ಮಿಕರು ಆಗಿದ್ದಾರೆ ಬೇರೆ ವ್ಯಾಪಾರಗಳಲ್ಲಿ ಬರಿಯ ಶೇಕಡಾ 9.33 ರಷ್ಟು ಜನ ನಿರತರಾಗಿದ್ದಾರೆ. ಗುಜರಾತಿನಲ್ಲೇ ಶೇ. 76 ರಷ್ಟು ಜನ ಬಡತನದ ಗೆರೆಗಿಂತ ಕೆಳಗಿದ್ದಾರೆ. ತಮ್ಮ ಆರ್ಥಿಕ ಸ್ಥಿತಿಯಿಂದಾಗಿ ಇವರು ನೆಲವನ್ನು ಮಾರಿ, ಭೂಹೀನ ಕಾರ್ಮಿಕರಾಗುತ್ತಿದ್ದಾರೆ.

ಸಣ್ಣ ಹಿಡುವಳಿಗಾರರ, ಕೃಷಿ ಕಾರ್ಮಿಕರಿಗೆ ಆಧಾರವಾಗಿದ್ದ ಸಣ್ಣ ಪುಟ್ಟ ಅರಣ್ಯ ಉತ್ಪತ್ತಿಗಳನ್ನು ಅವರಿಂದ ಕಿತ್ತುಕೊಳ್ಳಲಾಗಿದೆ. ಇದುವರೆಗೆ ಕಂಟ್ರಾಕ್ಟರುಗಳು ಮತ್ತು ಲೇವಾದೇವಿಗಾರರು ಅರಣ್ಯ ಅಧಿಕಾರಿಗಳೊಂದಿಗೆ ಸೇರಿ ಆದಿವಾಸಿಗಳನ್ನು ಶೋಷಣೆ ಮಾಡುತ್ತಿದ್ದರು. ಆದರೆ ಈಗ ಅರಣ್ಯ ಅಧಿಕಾರಿಗಳಿಗೆ ಶೋಷಣೆ ಮಾಡುವ ಹಕ್ಕನ್ನು ಸಂಪೂರ್ಣ ಕೊಡಲಾಗಿದೆ!

ಆದಿವಾಸಿಗಳ ಬಗ್ಗೆ ಸರ್ಕಾರದ ನೀತಿ :

ಈಗ ಆದಿವಾಸಿಗಳ ಬಗ್ಗೆ ಸರ್ಕಾರ ಘೋಷಿಸಿಕೊಂಡ ನೀತಿಯನ್ನು ಸ್ವಲ್ಪ ಗಮನಿಸೋಣ : ಅದಕ್ಕೂ ಈ ಮಸೂದೆಗೂ ಎಷ್ಟು ವ್ಯತ್ಯಾಸ ಇದೆಯೆಂದು ತಿಳಿಯುತ್ತದೆ.

(1) ಆದಿವಾಸಿ ಆರ್ಥಿಕ ವ್ಯವಸ್ಥೆಯಲ್ಲಿ ಅರಣ್ಯಗಳು ವಹಿಸುವ ಪ್ರಮುಖ ಪಾತ್ರವನ್ನು ಮಾನ್ಯಮಾಡಬೇಕು ಮತ್ತು ಅರಣ್ಯ ನೀತಿಯು ಅದಕ್ಕನುಗುಣವಾಗಿರಬೇಕು.

(2) ಆದಿವಾಸಿಗಳು ಊಳುತ್ತಿರುವ ಮತ್ತು ನೆಲೆಸಿರುವ ಭೂಮಿಯ ಮೇಲೆ ಅವರಿಗೆ ಆನುವಂಶಿಕ ಮತ್ತು ಬೇರ್ಪಡಿಸಲಾಗದ ಅಧಿಕಾರ ಇರಬೇಕು.

(3) ಸಣ್ಣ ಪುಟ್ಟ ಅರಣ್ಯ ಉತ್ಪತ್ತಿಗಳು ಆದಿವಾಸಿಗಳ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿವೆ. ಇವುಗಳನ್ನು ಸಂಗ್ರಹಿಸುವ ಅಧಿಕಾರವನ್ನು ಎಲ್ಲಾ ರಾಜ್ಯಗಳು ಆದಿವಾಸಿಗಳಿಗೆ ನೀಡಬೇಕು.

ಈ ಮಸೂದೆಗೆ ತೀವ್ರ ಪ್ರತಿಭಟನೆ ಎಲ್ಲೆಡೆ ವ್ಯಕ್ತವಾಗುತ್ತಿದೆ. ಆದಿವಾಸಿಗಳನ್ನು ಮತ್ತಿತ್ತರ ವನವಾಸಿಗಳನ್ನು ಸಂಘಟಿಸುವ ಪ್ರಯತ್ನ ನಡೆಯುತ್ತಿದೆ. ಕೆಲವು ರಾಷ್ಟ್ರದ್ರೋಹಿಗಳು ಅನೇಕ ಕಡೆ ಆದಿವಾಸಿಗಳನ್ನು ತಪ್ಪು ದಾರಿಗೆಳೆಯುತ್ತಿದ್ದಾರೆ. ಸರ್ಕಾರದ ಕುತಂತ್ರದ ಜಾಲದಿಂದ ಬಡವಾಗಿರುವ ಆದಿವಾಸಿಗಳ ಹಿತರಕ್ಷಣೆಯಲ್ಲಿ ಎಡ ಮತ್ತು ಜನವಾದೀ ಶಕ್ತಿಗಳು ಪ್ರಮುಖ ಪಾತ್ರವಹಿಸುವದು ಅತ್ಯಗತ್ಯ.

○

ತ್ರಿಪುರಾ :

ಎಡರಂಗವನ್ನು ಕಿತ್ತೊಗೆಯಲು ಹವಣಿಕೆ

"ರಾಜ್ಯದಲ್ಲಿ ಶಕ್ತಿಶಾಲೀ ಚಳವಳಿಯನ್ನು ಬೆಳೆಸಿ ನಮ್ಮ ಸರ್ವೋಚ್ಛ ನಾಯಕಿಯ ಗಮನ ಸೆಳೆಯಲು ಯತ್ನಿಸಿ. 'ದುರ್ಗೆ' ಎಂದು ಖ್ಯಾತರಾಗಿರುವ ನಮ್ಮ ನಾಯಕಿ ಅವಶ್ಯ ಬಿದ್ದಲ್ಲಿ ಎಡರಂಗ ಸರಕಾರವನ್ನು ಕಿತ್ತೊಗೆಯಬಲ್ಲರು"— ಇದು ಜೂನ್ 20 ರಂದು ಅಗರ್ತಲಾದ ಕಾಂಗ್ರೆಸ್ ಭವನದಲ್ಲಿ ಕಾಂಗ್ರೆ ಕಾರ್ಯಕರ್ತರನ್ನುದ್ದೇಶಿಸಿ ಕೇಂದ್ರದ, ಗಿರಿಜನ ಮತ್ತು ಕಲ್ಯಾಣ ಖಾತೆಯ ರಾಜ್ಯ ಸಚಿವ 'ತುಂಗನ್' ಮಹಾಶಯ ಮಾತನಾಡುತ್ತಾ ಬೊಗಳಿದ್ದು. ಅರುಣಾಚಲ ಪ್ರದೇಶದಲ್ಲಿ ತನ್ನ ಜನರಿಂದಲೇ ತಿರಸ್ಕೃತನಾದ ಈ ಮಹಾಶಯ ಇಂದಿರಾರ ಸಂಪುಟದಲ್ಲಿ ಸ್ಥಾನ ಗಿಟ್ಟಿಸಿದವ. ಹೇಗಾದರೂ ಮಾಡಿ ತನ್ನ ನಾಯಕಿಯನ್ನು ಸಂತುಷ್ಟಿಗೊಳಿಸುವ ಹವಣಿಕೆಯಲ್ಲಿದ್ದವ.

ತ್ರಿಪುರಾಕ್ಕೆ ತುಂಗನ್ ಅವರ ಭೇಟಿ ಅವರ ಖಾತೆಗೆ ಸಂಬಂಧಿಸಿದ ಕಾರ್ಯಗಳಿಗೆ ಸಂಭಂಧಿಸಿದ್ದು, ಆದರೆ ಈ ಮಹಾಶಯ ಆ ಕೆಲಸಕ್ಕೆ ಗಮನವನ್ನೇ ನೀಡಲಿಲ್ಲ. ತ್ರಿಪುರಾದ ಸಚಿವ ಸಂಪುಟದ ಯಾವ ಮಂತ್ರಿಯನ್ನು, ಸಮಾಜ ಕಲ್ಯಾಣ ಬೋರ್ಡಿನ ಅಧಿಕಾರಿಗಳನ್ನು ಭೇಟಿ ಮಾಡಲು ಈತನಿಗೆ ಸಮಯಾವಕಾಶವಿರಲಿಲ್ಲ. ಆದರೆ ವಿರೋಧ ಪಕ್ಷಗಳ, ರಾಜ್ಯದ ಕೋಮುವಾದಿ, ಪ್ರತ್ಯೇಕವಾದಿ ಪಕ್ಷಗಳ ನಾಯಕರನ್ನು, ಸಂಘಟಕರನ್ನು ಭೇಟಿ ಮಾಡಲು ಈತನಿಗೆ ಸಾಕಷ್ಟು ಸಮಯವಿತ್ತು.

ಈ ಮೇಲ್ಕಾಣಿಸಿದ ಪ್ರಚೋದನ ಮಾತುಗಳಿಂದ ತುಂಗನ್ ತಾನೊಬ್ಬ ಇಂದಿರಾರ ಪಟ್ಟ ಶಿಷ್ಯನೆಂದು ಸಾಧಿಸಲು ಯತ್ನಿಸಿದ. ಪ್ರಜಾಸತ್ತಾತ್ಮಕವಾಗಿ ಜನತೆಯಿಂದ ಆರಿಸಲ್ಪಟ್ಟಿರುವ ತ್ರಿಪುರಾದ ಎಡರಂಗವನ್ನು ಕಿತ್ತೊಗೆಯುವ ಬೆದರಿಕೆ, 1959ರಲ್ಲಿ ಕೇರಳದ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಸರಕಾರವನ್ನು 'ವಿಮೋಚನ' ಸಮರದ ಹೆಸರಿನಲ್ಲಿ ಕಿತ್ತೊಗೆಯುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಇಂದಿರಾ ಗಾಂಧಿಯ ವೈಖರಿಯ ಅನುಗುಣವಾಗೇ ಇದೆ. ಸ್ವತಃ ತಾನೊಬ್ಬ ಗಿರಿಜನನಾಗಿದ್ದುಕೊಂಡು, ರಾಜ್ಯದ ಗಿರಿಜನ ಪ್ರದೇಶದ ಸ್ಥಿತಿಗತಿಗಳನ್ನು, ಗಂಭೀರ ಪರಿಸ್ಥಿತಿಯಲ್ಲಿರುವ ರಾಜ್ಯದ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸುವದನ್ನು ಬಿಟ್ಟು, ಮುಂದಿನ ಡಿಸೆಂಬರ್‌ನಲ್ಲಿ ನಡೆಯಲಿರುವ ರಾಜ್ಯ ವಿಧಾನ ಸಭಾ ಚುನಾವಣೆಯ ಸಮಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವ ಪರಿಸ್ಥಿತಿ ಉಂಟು ಮಾಡುವದರಲ್ಲೇ ಸಮಯ ಕಳೆದರು.

●

ವಿದ್ಯಾರ್ಥಿಗಳಿಗೆ ನೆರವು

ಉಳ್ಳಾಲದ "ದಿ| ಪಿ.ಎಂ. ಡಿಸೋಜ ಸ್ಮಾರಕ ಫಂಡ್"ಸಮಿತಿಯು 3-6-82 ರಂದು ಉಳ್ಳಾಲ ಹ್ಯೊಗೆ ಟ್ರ್ಯಾಯಿಲೆಂಡ್ಸ್ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಸ್ಲೇಟ್, ಪುಸ್ತಕ ಪೆನ್ಸಿಲ್ಲುಗಳನ್ನು ವಿತರಣೆ ಮಾಡಿತು.

ಆರಂಭದಲ್ಲಿ ನಿಧಿಯ ಕಾರ್ಯದರ್ಶಿಯವರು ನಿಧಿಯ ಉದ್ಧೇಶವನ್ನು ವಿವರಿಸಿದರು. ಪಠ್ಯ ಪುಸ್ತಕಗಳನ್ನು ಶ್ರೀ ಎಚ್. ಡಿಸೋಜ ಅವರು ವಿತರಣೆ ಮಾಡುತ್ತಾ, ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಕೊನೆಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಮೆಟಿಲ್ಡಾ ಅವರು ನಿಧಿಯ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು.

●

ಭಾರತ ದರ್ಶನ

ತಮಿಳುನಾಡು:

ತಿರುನಲ್ವೇಲಿ ಜಿಲ್ಲೆಯಲ್ಲಿ ಕೋಮುದ್ವೇಷದ ರಥ

ವಿಶ್ವ ಹಿಂದೂ ಪರಿಷತ್ ನೇತೃತ್ವದ, ಹಿಂದೂ ಕೋಮುವಾದಿಗಳ ನೇತೃತ್ವದ 'ಜ್ಞಾನ ರಥ' ತಿರುನಲ್ವೇಲಿ ಜಿಲ್ಲೆಯ ಗ್ರಾಮಗಳನ್ನೆಲ್ಲಾ ಸುತ್ತುಕೊಂಡು ಹೋಯಿತು. ಕೆಲವೇ ದಿನಗಳ ನಂತರ ಈ ಜಿಲ್ಲೆಯ ಹಲವು ಹಳ್ಳಿಗಳಲ್ಲಿ ವಾಸಿಸುತ್ತಿರುವ ಹರಿಜನರು, ಮುಸ್ಲಿಮರು ಹಾಗೂ ಇತರ ದುರ್ಬಲ ವರ್ಗಗಳ ಜನರ ಮೇಲೆ ಆರ್. ಎಸ್. ಎಸ್. ಹಾಗೂ ಸವರ್ಣೀಯ ಹಿಂದೂಗಳ ಹಲ್ಲೆ ನಡೆಯಿತು. ಕೋಮುದ್ವೇಷಕ್ಕೆ ಗುರಿಯಾದ ಹಳ್ಳಿಗಳಿಗೆ ಭೇಟಿ ನೀಡಿ ವಿಷಯ ಸಂಗ್ರಹಿಸಿದ ಸಿ.ಪಿ.ಐ. (ಎಂ) ಕಾರ್ಯಕರ್ತರ ತಂಡಕ್ಕೆ ಅಲ್ಲಿಯ ಜನ ತಿಳಿಸಿದ ಒಂದೆರಡು ಘಟನೆಗಳು ಹೀಗಿವೆ.

ಪುಲಿಯಂಗುಡಿ—ನಾಲ್ಕೈದು ದಶಕಗಳಿಂದ ಅಣ್ಣ ತಮ್ಮಂದಿರಂತೆ ಇದ್ದ ವಿವಿಧ ಕೋಮುಗಳ ಬಡ ನೇಕಾರರು ಹಾಗೂ ಮಡಿವಾಳರ 300 ಮನೆಗಳು ಬೆಂಕಿಗಾಹುತಿಯಾಗಿವೆ. ಮನೆಯಲ್ಲಿದ್ದ ಎಲ್ಲಾ ಪಾತ್ರೆ, ಪಗಡ, ಮಗ್ಗವೂ ಸೇರಿದಂತೆ ಎಲ್ಲಕ್ಕೂ ಬೆಂಕಿ ಹಚ್ಚಲಾಯಿತು. ಪೋಲೀಸರು ಹರಿಜನ ಕೇರಿಗಳಲ್ಲಿ ಗುಂಡು ಹಾರಿಸಿದ್ದರಿಂದ ಇಬ್ಬರು ಸತ್ತರು. ಅವರಲ್ಲಿ ಒಬ್ಬ 14 ವರ್ಷದ ಮಡಿವಾಳರ ಹುಡುಗ. ಆತ ಸಂಸಾರದ ಏಕ ಮಾತ್ರ ಆಸರೆಯಾಗಿದ್ದ

ಆಯ್ಯಪುರಂ-49 ಹರಿಜನ ಮನೆಗಳು ಬೆಂಕಿಗಾಹುತಿಯಾಗಿವೆ. ಐವರು ಅಮಾನುಷವಾಗಿ ಕೊಲ್ಲಲ್ಪಟ್ಟಿದ್ದಾರೆ. ಅವರಲ್ಲಿ ಒಬ್ಬಳು 35 ವರ್ಷದ ಮಹಿಳೆಯನ್ನು ಬಾವಿಗೆಸೆಯಲಾಯಿತು. ಇನ್ನೊಬ್ಬಳು 60 ವರ್ಷದ ವೃದ್ಧೆ. ಹಲ್ಲೆ ನಡೆಸಿದವರು ಭಗವಾ ರುಮಾಲುಗಳನ್ನು ಸುತ್ತುಕೊಂಡಿದ್ದರಂತೆ. ಕೆಲವು ಅವಮಾನಕರ ಸಂಪ್ರದಾಯಗಳನ್ನು ಪಾಲಿಸಲು ಹರಿಜನರು ಒಪ್ಪದಿದ್ದುದೇ ಹಲ್ಲೆಗೆ ಕಾರಣವಂತೆ.

ಮುತ್ತುಸ್ವಾಮೀಪುರಂ-ಈ ಹಳ್ಳಿಯ ಎಲ್ಲಾ 39 ಮನೆಗಳು ಧ್ವಂಸವಾಗಿವೆ. ಸವರ್ಣೀಯ ಹಿಂದೂಗಳ ಉಪಟಳ ತಾಳಲಾರದೆ ಮೂವತ್ತು ವರ್ಷಗಳ ಹಿಂದೆ ಇಲ್ಲಿ ಬಂದು ನೆಲೆಸಿದ ಹರಿಜನರು ಬೆವರುಸುರಿಸಿ ಸ್ವಲ್ಪ ಪ್ರಗತಿ ಸಾಧಿಸಿದ್ದುದರಿಂದ ಸವರ್ಣೀಯರಲ್ಲುಂಟಾದ ಅಸೂಯೆ ಈ ಹಲ್ಲೆಗೆ ಕಾರಣ.

ಕೇರಳ :

ಕೇಳಿರದ ಕವಿತೆ ಮಧುರವಾಗಿರಲಿಲ್ಲ - ಕಹಿಯಾಗಿತ್ತು

ಎಡಪ್ರಜಾಪ್ರಭುತ್ವ ರಂಗದ ಬೆನ್ನಲ್ಲಿ ಇರಿದವರಲ್ಲಿ ಒಬ್ಬರಾದ ಕೆ. ಎಂ. ಮಣಿ ಬಲಪಂಥೀಯ ರಂಗದ ಸರಕಾರದ ಹಣಕಾಸು ಮಂತ್ರಿಯಾದ ಮೇಲೆ ಮುಂಬರಲಿದ್ದ ಬಜೆಟ್‌ನ ಬಗ್ಗೆ ಪತ್ರಿಕಾಕರ್ತರೊಡನೆ ಮಾತನಾಡುತ್ತಾ "ಕೇಳಿದ ಹಾಡುಗಳು ಮಧುರವಾಗಿವೆ. ಕೇಳಿರದ ಹಾಡುಗಳು ಇನ್ನಷ್ಟು ಮಧುರವಾಗಿವೆ." ಎಂದು ಕಲ್ಪನಾ ಲೋಕವಿಹಾರಿಯಾಗಿ ಕವಿತ್ವ ಉದುರಿಸಿದ್ದರು. ಆದರೆ ಈ ಭೂಮಿಯ ಮೇಲಿರುವ ಕೇರಳದ ವಿಧಾನ ಸಭೆಯಲ್ಲಿ ಅವರು ಮಂಡಿಸಿದ ಬಜೆಟ್ ಬಲಪಂಥೀಯ ಆಡಳಿತರಂಗದ ಕೆಲವು ಘಟಕಗಳಿಗೂ ನುಂಗಲಾರದ ಕಹಿಗುಳಿಗೆಯಾಗಿ ಬಿಟ್ಟಿದೆ. ಒಂದೆರಡು ಕಣ್ಣೊರೆಸುವ ಒಳ್ಳೆಯ ಅಂಶಗಳು ಬಿಟ್ಟರೆ ಬಜೆಟ್ ಜನಸಾಮಾನ್ಯರಿಗೆ ಪರಿಹಾರವೇನೂ ಕೊಟ್ಟಿಲ್ಲ, ಮಾತ್ರವಲ್ಲ ಆಡಳಿತ ರಂಗದ ಜನವಿರೋಧೀ ಧೋರಣೆಗಳನ್ನು ಸ್ಪಷ್ಟಗೊಳಿಸಿದೆ. ಎಡ-ಪ್ರಜಾಪ್ರಭುತ್ವ ಸರಕಾರ ಮೀನುಗಾರ ಸಮುದಾಯದ ಕ್ಷೇಮಾಭಿವೃದ್ಧಿಗಾಗಿ ಕೈಗೊಂಡ ಗ್ರಾಮೀಣ ಸಹಕಾರಿಗಳು, ವಿಮೆ ಹಾಗೂ ಇತರ ಹಲವು ಕಾರ್ಯಕ್ರಮಗಳು ಮಣಿಯವರ 'ಮಧುರ' ಬಜೆಟ್ಟಿನಲ್ಲಿ ಬುಡಮೇಲಾಗಿವೆ. ಹಲವು ವಿದ್ಯುತ್ ಯೋಜನೆಗಳನ್ನು ಪೂರೈಸಲು ಹಣವಿಲ್ಲದ್ದರಿಂದ ವಿದ್ಯುತ್ ಖೋತಾ ಬರಲಿದೆಯೆಂದು ವಿದ್ಯುಚ್ಛಕ್ತಿ ಮಂತ್ರಿ ರಾಜ್ಯದ ಜನತೆಯನ್ನು ಬೆದರಿಸಿದ್ದಾರೆ. ಕೇಂದ್ರದಲ್ಲಿ ತಮ್ಮದೇ ಸರಕಾರವಿದ್ದರೂ ರಾಜ್ಯದ ಯೋಜನೆಗಳಿಗೆ ಹಣಕಾಸು ಸಹಾಯ ಪಡೆಯುವ ಯೋಚನೆಯೇ ಈ ಸರಕಾರಕ್ಕಿದ್ದಂತಿಲ್ಲ.

ಮೆಟ್ರಿಕ್ ಆಗದ ನಾವಿಕರ ಭರ್ತಿಗೆ ಸಂಬಂಧಪಟ್ಟಂತೆ ಜುಲೈ 1 ರಂದು ತಿರುವನಂತಪುರದಲ್ಲಿನ ಅವ್ಯವಸ್ಥೆ ಸರಕಾರಕ್ಕೆ ಜನಸಾಮಾನ್ಯರ ಬಗ್ಗೆ ಇರುವ ನಿರ್ಲಕ್ಷ್ಯಕ್ಕೆ ಇನ್ನೊಂದು ಸಾಕ್ಷಿ. ಈ ಕೆಲಸದ ಜಾಹೀರಾತನ್ನು ಕಂಡ ಸಾವಿರಾರು ನಿರುದ್ಯೋಗಿ ಯುವಕರು ಕೇರಳದ ಎಲ್ಲಾ ಭಾಗಗಳಿಂದ ಜೂನ್ 30ರ ರಾತ್ರಿ ತಿರುವನಂತಪುರಕ್ಕೆ ಬಂದು ಆಹಾರ, ನಿದ್ದೆಯಿಲ್ಲದೆ ಕಾಯುತ್ತಿದ್ದರೆ ಜುಲೈ 1ರ ಬೆಳಗ್ಗೆ ಭರ್ತಿಗಾಗಿ ಸಂದರ್ಶನವನ್ನು ಮುಂದೂಡಲಾಗಿದೆಯೆಂದು ಪ್ರಕಟಿಸಲಾಯ್ತು. ಸ್ವಾಭಾವಿಕವಾಗಿಯೇ ಕಾದು ಸುಸ್ತಾಗಿದ್ದ ಯುವಕರನ್ನು ಇದು ರೇಗಿಸಿತು. ಸಶಸ್ತ್ರ ಪೋಲೀಸರಿಂದ ಹುಚ್ಚಾಪಟ್ಟೆ ಲಾಠೀ ಚಾರ್ಜು ನಡೆಯಿತು.

ತ್ರಿಪುರಾ :

ಕಾಮ್ರೇಡ್ ಸಚೀಂದ್ರದೇವ್‌ಬರ್ಮಾ- ಕೊಲೆ ರಾಜಕೀಯಕ್ಕೆ ಇನ್ನೊಂದು ಬಲಿ

ತ್ರಿಪುರಾ ಬುಡಕಟ್ಟು ಪ್ರದೇಶ ಸ್ವಯಮಾಡಳಿತ ಜಿಲ್ಲಾ ಸಮಿತಿಯ ಸದಸ್ಯರೂ, ಸಿ. ಪಿ. ಐ. (ಎಂ)ನ ನಾಯಕರೂ ಆದ ಕಾಮ್ರೇಡ್ ಸಚಿಂದ್ರ ದೇವ್ ಬರ್ಮಾ ಅವರನ್ನು ತ್ರಿಪುರಾ ಉಪಜಾತಿ ಜುಬಾ ಸಮಿತಿ (ಟಿ.ಯು.ಜೆ ಎಸ್.) ಗೂಂಡಾಗಳು ಅವರ ಸ್ವಂತ ಮನೆಯಲ್ಲಿ ಗುಂಡಿಟ್ಟು ಹತ್ಯೆ ಮಾಡಿದ್ದಾರೆ. ಐವತ್ತು ವರ್ಷದ ಕಾಮ್ರೇಡ್ ಬರ್ಮಾ ಈ ಪ್ರದೇಶದ ಅತ್ಯಂತ ಜನಪ್ರಿಯ ನಾಯಕರಾಗಿದ್ದರು. ಗಣಮುಕ್ತಿ ಪರಿಷದ್‌ನ ಉಟ್ಲಾ ಪ್ರಾದೇಶಿಕಸಮಿತಿಯ ಕಾರ್ಯದರ್ಶಿಯಾಗಿದ್ದರು. 1980ರಲ್ಲಿ ಪ್ರತಿಕ್ರಿಯಾವಾದಿಗಳು ನಡೆಸಿದ ಕೋಮು ಹತ್ಯಾಕಾಂಡದ ಸಮಯದಲ್ಲಿ ಕೋಮು ಸೌಹಾರ್ದವನ್ನು ಮತ್ತೆ ಸ್ಥಾಪಿಸಿ ಅದನ್ನು ಬಲಪಡಿಸುವಲ್ಲಿ ಇವರು ಮಹತ್ತರ ಪಾತ್ರ ವಹಿಸಿದ್ದರು.

ಇಂತಹ ಪ್ರಯತ್ನದಲ್ಲಿ ನಿರತರಾಗಿದ್ದಾಗಲೇ ಟಿ.ಯು.ಜೆ.ಎಸ್. ಗೂಂಡಾಗಳಿಂದ ಕೊಲ್ಲಲ್ಪಟ್ಟ ಮಾಜೀ ಎಂ.ಎಲ್.ಎ. ಕಾಮ್ರೇಡ್ ಕಾಳೀದಾಸ್ ದೇವ್ ಬರ್ಮಾ ಇವರ ಚಿಕ್ಕಪ್ಪ.

ಕೆಲವು ದಿನಗಳ ಹಿಂದೆ ಕೇಂದ್ರದ ಬುಡಕಟ್ಟು ಕ್ಷೇಮಾಭಿವೃದ್ಧಿ ಮಂತ್ರಿ ತುಂಗನ್ ತ್ರಿಪುರಾಕ್ಕೆ ಬಂದಿದ್ದರು. ಅವರು ಯಾವುದೇ ಅಧಿಕೃತ ಭೇಟಿಗಾಗಿ ಬಂದಿರಲಿಲ್ಲ ಬದಲಾಗಿ ಟಿ. ಯು. ಜೆ.ಎಸ್., ಆಮ್ರ ಬಂಗಾಲೀ ಇತ್ಯಾದಿ ಸಂಕುಚಿತವಾದಿಗಳೊಡನೆ ಗುಪ್ತ ಮಾತುಕತೆ ನಡೆಸಿ ನಿಸ್ತೇಜವಾಗುತ್ತಿರುವ ಕಾಂಗ್ರೆಸ್ (ಐ) ಕಾರ್ಯಕರ್ತರನ್ನು ಹುರಿದುಂಬಿಸಿ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕೆಡಿಸಲು ಉತ್ತೇಜನ ನೀಡಿ ಹೋಗಿದ್ದರು. ಇಬ್ಬರು ಸಿ.ಪಿ ಐ.(ಎಂ) ಪಂಚಾಯತ್ ಅಧ್ಯಕ್ಷರ ಹಾಗೂ ಕಾಂ। ಬರ್ಮಾರವರ ಹತ್ಯೆ ಇದರದ್ದೇ ಫಲ.

ಜೂನ್ 26 ರಂದು ಕಾಂ। ಬರ್ಮಾರವರ ಸ್ಥಳವಾದ ಖೋಮಾಪುರದಲ್ಲಿ ಅಗಲಿದ ನಾಯಕನಿಗೆ ಶ್ರದ್ಧಾಂಜಲಿಯಾಗಿ ಸಂಪೂರ್ಣ ಹರತಾಳ ಆಚರಿಸಲಾಯಿತು. ಕಾಂಗ್ರೆಸ್ (ಐ) ಬೆಂಬಲಿಗರು ಇದನ್ನು ವಿಫಲಗೊಳಿಸಲು ಶತಪ್ರಯತ್ನ ನಡೆಸಿದರೂ ಹರತಾಳ ಸಂಪೂರ್ಣ ಯಶಸ್ವಿಯಾಯಿತು.

ಮಧ್ಯ ಪ್ರದೇಶ:

ಇಂಟೆಕ್‌ನ ಚಮಚಾ ಸಂಘವನ್ನು ಒಪ್ಪದ್ದಕ್ಕೆ ಗೋಳೀಬಾರ್

ಸಾರ್ವಜನಿಕ ವಲಯದ ಮ್ಯಾಂಗನೀಸ್ ಓರ್ ಲಿಮಿಟೆಡ್‌ನ ಮರ್ಬೇಲಿ ಮ್ಯಾಂಗನೀಸ್ ಗಣಿಗಳಲ್ಲಿ ಮೂರು ಸಾವಿರ ಕಾರ್ಮಿಕರು ದುಡಿಯುತ್ತಿದ್ದಾರೆ. ಅಲ್ಲಿ ಮೊದಲೊಂದು ಇಂಟಕ್ ಯೂನಿಯನ್ ಇತ್ತು, ಅದರ ಬಾಲಬಡುಕತನದಿಂದ ಬೇಸತ್ತ ಕಾರ್ಮಿಕರು ಕೆಲವುತಿಂಗಳಿಂದ ಹೊಸದೊಂದು ಸಂಘ ಸ್ಥಾಪಿಸಿಕೊಂಡರು. ಮರುದಿನದಿಂದಲೇ ಆಡಳಿತವರ್ಗ, ಜಿಲ್ಲಾ ಆಡಳಿತ ಹಾಗೂ ಪೋಲೀಸ್‌ನವರ ಕಿರುಕುಳ ಆರಂಭವಾಯಿತು. ಹೊಸ ಸಂಘದ ಪ್ರಮುಖ ಕಾರ್ಯಕರ್ತನೊಬ್ಬನಿಗೆ ಜೂನ್ 25 ರಂದು ಆಡಳಿತವರ್ಗ ಅನಾವಶ್ಯಕವಾಗಿ ಶೋಕಾಸ್ ನೋಟೀಸು ಜಾರಿ ಮಾಡಿತು. ಮಹಿಳಾ ಕಾರ್ಮಿಕರೂ ಸೇರಿದಂತೆ ಎಲ್ಲಾ ಕಾರ್ಮಿಕರು ಮ್ಯಾನೇಜರ್ ಕಚೇರಿಯೆದುರು ಶಾಂತವಾಗಿ ನೆರೆದು ನೋಟೀಸು ವಾಪಾಸು ಪಡೆಯುವಂತೆ ವಿನಂತಿಸಿಕೊಂಡರು. ಆದರೆ ಆಡಳಿತ ವರ್ಗ ತಮ್ಮನ್ನು ಘೆರಾವ್ ಮಾಡಲಾಗಿದೆ ಎಂದು ಪೋಲೀಸರಿಗೆ ಸುಳ್ಳು ಫೋನ್ ಮಾಡಿದರು. ತಕ್ಷಣ ಪೋಲೀಸ್ ಬಂದವರೇ ಯಾವ ಮುನ್ಸೂಚನೆಯೂ ಇಲ್ಲದೆ ಲಾಠಿ ಬೀಸಲಾರಂಭಿಸಿದರು. ಇದರಿಂದ ಮುಂದುಗಡೆ ಶಾಂತರಾಗಿ ಕುಳಿತಿದ್ದ ಮಹಿಳಾ ಕಾರ್ಮಿಕರಲ್ಲಿ ಹಲವರು ಗಾಯಗೊಂಡರು. ಉಳಿದ ಕಾರ್ಮಿಕರು ಇದನ್ನು ಪ್ರತಿಭಟಿಸಿದರು. ಆಗ ಮುನ್ಸೂಚನೆಯಿಲ್ಲದೆ ಪೋಲೀಸರು ಗುಂಡುಹಾರಿಸಲಾರಂಭಿಸಿದರು. ಇದರಿಂದಾಗಿ ಇದುವರೆಗೆ ನಾಲ್ಕು ಜನ ಕಾರ್ಮಿಕರು ಅಸು ನೀಗಿದ್ದಾರೆ. ಸಿ.ಐ.ಟಿ.ಯು.ನ ಮಧ್ಯ ಪ್ರದೇಶ ರಾಜ್ಯ ಸಮಿತಿ ಈ ಹುಚ್ಚಾಪಟ್ಟೆ ಗೋಳೀಬಾರನ್ನು ಖಂಡಿಸಿ ನ್ಯಾಯಾಂಗ ತನಿಖೆಯಾಗಬೇಕೆಂದು ಒತ್ತಾಯಿಸಿದೆ.

ರಾಜಸ್ತಾನ :

ಇಲ್ಲಿನ ಬಾಲಬಡುಕರ ಸಂಘ ಬಿ.ಎಂ.ಎಸ್.

ಮರ್ಬೇಲಿಯ ಕಾರ್ಮಿಕರ ಮೇಲೆ ಹಲ್ಲೆ ನಡೆಯಲು ಕಾರಣ ಇಂಟಕ್‌ಗೆ ಸೇರಿದ ಮ್ಯಾನೇಜ್‌ಮೆಂಟ್ ಬಾಲಬಡುಕ ಸಂಘವಾದರೆ ರಾಜಸ್ತಾನದ ದುಂಗಾರ್‌ಪುರದಲ್ಲಿ ಆಡಳಿತ ವರ್ಗದ ಚಮಚಾ ಬಿ. ಎಂ. ಎಸ್. ನ ಸಂಘ ಕಾರ್ಮಿಕರ ಮೇಲೆ ಸ್ವತಃ ಹಲ್ಲೆ ನಡೆಸಿತು.

ಎರಡೂವರೆ ವರ್ಷಗಳ ಹಿಂದೆ ಇಲ್ಲಿ ಒಂದು ಸಿಂಥೆಟಿಕ್ ಕಾರ್ಖಾನೆ ಆರಂಭವಾಯ್ತು. ಈ ಹೊಸ ಕಾರ್ಖಾನೆಯ ವ್ಯವಸ್ಥಾಪಕ ವರ್ಗದಲ್ಲಿ ಹೆಚ್ಚಿನವರು ಆರ್.ಎಸ್.ಎಸ್. ತರಬೇತಿ ಪಡೆದಿದ್ದವರು. ನಿರೀಕ್ಷೆಯಂತೆ ಕಾರ್ಮಿಕರನ್ನು ಹತೋಟಿಯಲ್ಲಿಡಲು ಅನುಕೂಲವಾಗುತ್ತದೆಂದು ವ್ಯವಸ್ಥಾಪಕ ವರ್ಗವೇ ಬಿ. ಎಂ. ಎಸ್. ಸಂಘವನ್ನು ಹುಟ್ಟು ಹಾಕಿತು. ಈ ಸಂಘ ಕಾರ್ಮಿಕರ ಹಿತರಕ್ಷಣೆಯ ಬಗ್ಗೆ ಸ್ವಲ್ಪವೂ ಯೋಚಿಸದೆ ಕೇವಲ ಆಡಳಿತ ವರ್ಗದ ಬಾಲಹಿಡಿದು ಓಡಾಡುತ್ತಿರುವುದನ್ನು ಕಂಡು ಬಹು ಸಂಖ್ಯೆಯ ಕಾರ್ಮಿಕರು ಸೇರಿ ಸಿ. ಐ. ಟಿ. ಯು. ಘಟಕವೊಂದನ್ನು ಸ್ಥಾಪಿಸಿಕೊಂಡರು. ಮಾತ್ರವಲ್ಲ ಆಡಳಿತ ವರ್ಗದೆದುರು ಬೇಡಿಕೆಗಳನ್ನು ಮಂಡಿಸಿ ಏಳು ದಿನಗಳೊಳಗೆ ಮಾತುಕತೆ ಆರಂಭಿಸಬೇಕೆಂದು ಕೇಳಿದರು. ಆಡಳಿತ ವರ್ಗಕ್ಕೆ ತನ್ನ ಉಪಾಯ ವಿಫಲವಾದದ್ದರಿಂದ ಬಹಳ ರೇಗಿತು. ಬಿ. ಎಂ. ಎಸ್. ನ ಚಮಚಾ ಸಂಘವನ್ನು ಬಹುಸಂಖ್ಯೆಯಲ್ಲಿ ಆದಿವಾಸಿಗಳೇ ಇರುವ ಕಾರ್ಮಿಕರ ಮೇಲೆ ಛೂ ಬಿಟ್ಟರು. ಚಮಚಾ ಸಂಘದ ಅಧ್ಯಕ್ಷ ತನ್ನ ಗೂಂಡಾಗಳೊಂದಿಗೆ ಕಾರ್ಮಿಕರ ಮೇಲೆ ಹಲ್ಲೆ ನಡೆಸಿದ. ಕಾರ್ಮಿಕರು ಸರಿಯಾದ ಉತ್ತರ ಕೊಟ್ಟರು. ನಂತರ ಕಾರ್ಮಿಕರ ಕಾಲೋನಿಗೆ ನುಗ್ಗಿ ಈ ಗುಂಪು ಸಿಕ್ಕಸಿಕ್ಕದ್ದಕ್ಕೆ ಬೆಂಕಿ ಹಚ್ಚಿ ಸಿ.ಐ.ಟಿ.ಯು.ನ ಹಲವು ಕಾರ್ಯಕರ್ತರನ್ನು ಜೀವಂತ ಸುಡಲು ಪ್ರಯತ್ನಿಸಿತು. ಹಲವು ಕಾರ್ಯಕರ್ತರು ತೀವ್ರ ಗಾಯಗೊಂಡಿದ್ದಾರೆ. ಕೆಲವರ ಸ್ಥಿತಿ ಗಂಭೀರವಾಗಿದೆ. ಈ ದಹನ ಕಾಂಡದ ಮುಖಂಡತ್ವ ವಹಿಸಿದ್ದು ಈ ಕಾರ್ಖಾನೆಯ ಒಬ್ಬ ಟೆಕ್ನಿಕಲ್ ಮ್ಯಾನೇಜರ್ ಅಂತೆ !

ಮರ್ಬೇಲಿಯದಲ್ಲಿ ಆಡಳಿತವರ್ಗ ಸುಳ್ಳು ಫೋನ್ ಮಾಡಿದರೂ ಪೋಲೀಸ್ ಓಡಿ ಬಂದು ಕಾರ್ಮಿಕರ ಮೇಲೆ ಲಾಠೀ ಪ್ರಹಾರ ಮಾಡಿತ್ತು. ಆದರೆ ಇಲ್ಲಿ ಬಿ.ಎಂ.ಎಸ್. ಚಮಚಾ ಹಾಗೂ ಆಡಳಿತವರ್ಗದ ಕೂಟದ ಸಂಚಿನ ಬಗ್ಗೆ ಪೋಲೀಸರಿಗೆ ದೂರು ಕೊಟ್ಟಿದ್ದರೂ ಏನೂ ಕ್ರಮ ತಗೊಳ್ಳಲಿಲ್ಲ. ಬದಲಿಗೆ ಗಾಯಗೊಂಡ ಸಿ. ಐ. ಟಿ. ಯು. ಕಾರ್ಮಿಕರನ್ನೇ ಬಂಧಿಸಿದ್ದಾರೆ. ಕಾಂಗ್ರೆಸ್ ಪ್ರಜಾಪ್ರಭುತ್ವದಲ್ಲಿ ನ್ಯಾಯದ ವೈಖರಿಯಿದು.

ಈ ರೀತಿಯ ದಮನಕಾಂಡ ನಡೆದರೂ 7 ದಿನಗಳ ಅವಧಿ ಮುಗಿದ ಕೂಡಲೇ 72 ಗಂಟೆಗಳ ಮುಷ್ಕರದ ನೋಟೀಸನ್ನು ಕಾರ್ಮಿಕರು ಕೊಟ್ಟಿದ್ದಾರೆ. ಕಾರ್ಖಾನೆಯ ಗೇಟಿನೆದುರು ಸರದಿ ಉಪವಾಸ ಮುಷ್ಕರ ಆರಂಭಿಸಿದ್ದಾರೆ.

○

ಕರ್ನಾಟಕ ರಾಜ್ಯದಲ್ಲಿ

ಆರ್ಥಿಕ ಬಿಕ್ಕಟ್ಟು ಬಿಗಿಯಾಗುತ್ತಿದೆ — ಎಚ್ಚರಿಕೆ

—ಎನ್ಕೆ

1982 ಉತ್ಪಾದನಾ ವರ್ಷವೆಂದು ಆಚರಿಸಬೇಕೆಂದೂ "ಸತ್ಯಮೇವ ಜಯತೇ" ಬದಲಾಗಿ "ಶ್ರಮ ಯೇವ ಜಯತೆ" ಎಂದು ಇಂದಿರಾ ಗಾಂಧಿ ಸಾರಿದ್ದರೂ ಕೂಡ ಕಾರ್ಮಿಕ ಚರಿತ್ರೆಯಲ್ಲೇ ಅತ್ಯಂತ ದೀರ್ಘವಾದ ಹೋರಾಟಗಳು ಉತ್ಪಾದನಾ ವರ್ಷದಲ್ಲೇ ನಡೆಯುತ್ತಿರುವುದನ್ನು ಕಂಡು ಆಶ್ಚರ್ಯಪಡಬೇಕಾಗಿಲ್ಲ. ಕಳೆದ 35 ವರ್ಷಗಳಿಂದ ಕಾಂಗ್ರೆಸ್ ನಡೆಸಿಕೊಂಡು ಬಂದ ಆರ್ಥಿಕ ನೀತಿಯೇ — ಇದಕ್ಕೆ ಕಾರಣ.

ಉತ್ಪಾದನಾ ವರ್ಷವೆಂದು ಘೋಷಿಸುತ್ತಿದ್ದಂತೆಯೇ ಮುಂಬಯಿಯ 2 ಲಕ್ಷದಷ್ಟು ಬಟ್ಟೆ ಗಿರಣಿ ಕಾರ್ಮಿಕರು ಮುಷ್ಕರ ಪ್ರಾರಂಭಿಸಿ 6 ತಿಂಗಳಿಗೂ ಮೀರಿ ತಮ್ಮ ಶಿಸ್ತಿನ ಹೋರಾಟವನ್ನು ನಡೆಸುತ್ತಿದ್ದಾರೆ. ಬೆಂಗಳೂರು ನಗರದ ಸುತ್ತಮುತ್ತ ಹಲವಾರು ಕಾರ್ಖಾನೆಗಳ ಶ್ರಮಜೀವಿಗಳು ಪೋಲೀಸರ ದಬ್ಬಾಳಿಕೆಯನ್ನೆದುರಿಸಿ ಹೋರಾಟ ನಡೆಸಿದ್ದಾರೆ. "ಶ್ರಮ ಯೇವ ಜಯತೆ" ಎಂದು ಸಾರುತ್ತಿದ್ದಂತೆಯೇ ಕಲ್ಕತ್ತಾದಲ್ಲಿ ಹಲವಾರು ನಾರಿನ, ಇಂಜಿನಿಯರಿಂಗ್ ಕಾರ್ಖಾನೆಗಳನ್ನು ಮಾಲಿಕರು ಮುಚ್ಚಿ ಸಾವಿರಾರು ಕೆಲಸಗಾರರಿಗೆ ಶ್ರಮ ಮಾಡಲು ಅವಕಾಶ ನಿರಾಕರಿಸಿದ್ದಾರೆ.

ದುಡಿಯಲು ಅವಕಾಶವಿಲ್ಲದೆ ಕಾರ್ಮಿಕರ ಕುಟುಂಬಗಳೆಲ್ಲ ಉಪವಾಸದ ಬವಣೆಯನ್ನನುಸರಿಸುತ್ತಿರುವಾಗ, ರೂಪಾಯಿಯ ಮೌಲ್ಯ 20 ಪೈಸೆಯಾಗಿದೆಂದು ಲೋಕ ಸಭೆಯಲ್ಲಿ ಆರ್ಥಿಕ ಮಂತ್ರಿಗಳು ಸಾರಿದ್ದಾರೆ. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ರೂ. 5000 ಕೋಟಿ ಸಾಲದ ಕಂತು ಬಿಡುಗಡೆಯಾಗುತ್ತಲೇ ಇದೆ, ರೂಪಾಯಿ ಅಪಮೌಲ್ಯವಾಗುತ್ತಲೇ ನಡೆದಿದೆ, ಬೆಲೆಗಳು ಗಗನಕ್ಕೇರುತ್ತಲೇ ಇವೆ, ಕಾರ್ಮಿಕರ ಮುಷ್ಕರಗಳು ಎಲ್ಲೆ ಮೀರಿ ಮುಂದುವರಿಯುತ್ತಲೇ ಇವೆ— ಇವೆಲ್ಲದರ ಕಾರಣದಿಂದಾಗಿ ದೇಶದ ಆರ್ಥಿಕ ಬಿಕ್ಕಟ್ಟು ಮತ್ತಷ್ಟು ಕೆಡುತ್ತಿದ್ದು, ಅದನ್ನು ಬಗೆಹರಿಸಲು ಶಕ್ಯವಾಗದೆ ಇಂದಿರಾ ಗಾಂಧಿ ಜೇಲ್‌ಸಿಂಗರಂಥವರನ್ನು ಅಧ್ಯಕ್ಷ ಪಟ್ಟಕ್ಕೇರಿಸಿ, ಜನರ ನಾಗರೀಕ ಹಕ್ಕುಗಳನ್ನು ಇನ್ನೂ ಮೊಟಕು ಗೊಳಿಸಲು, ಕಾರ್ಮಿಕರ ಹೋರಾಟಗಳನ್ನು ದಮನ ಮಾಡಲು ಹೊಂಚು ಹಾಕುತ್ತಿರುವ ಸಂಧಿಕಾಲದಲ್ಲೇ ಇದೇ ತಿಂಗಳು 23 ರಿಂದ 25ರ ವರೆಗೆ ಬೆಂಗಳೂರಿನಲ್ಲಿ ಅಖಿಲ ಭಾರತ ಕಾರ್ಮಿಕ ವರ್ಗದ ಕ್ರಾಂತಿಕಾರಿ ಕೇಂದ್ರವಾದ ಸಿ. ಐ. ಟಿ ಯು.ವಿನ ಕಾರ್ಯಕಾರೀ ಸಮಿತಿ ಸಭೆ ಸೇರುತ್ತಿರುವುದು ಅತ್ಯಂತ ಮಹತ್ವದ ಘಟನೆಯಾಗಿದೆ.

ಬಂಡವಾಳಶಾಹಿ ನೀತಿಯಿಂದಾಗಿ ಹದಗೆಡುತ್ತಿರುವ ಆರ್ಥಿಕ ಬಿಕ್ಕಟ್ಟನ್ನೆದುರಿಸಲು, ಕಾರ್ಮಿಕವರ್ಗ ಯಾವ ರೀತಿಯಲ್ಲಿ ತಮ್ಮ ಹೋರಾಟವನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆಂದು ಮಾರ್ಗದರ್ಶನ ನೀಡಲಿದೆ ಈ ಸಭೆ. ಸಭೆಯ ನಿರ್ಣಯಗಳನ್ನು ಅಭ್ಯಸಿಸಿ, ಹೋರಾಟದ ದಾರಿಯಲ್ಲಿ ಮುಂದುವರಿಯಲು ಅಣಿಯಾಗೋಣ.

ಬಂಗಾರಪ್ಪನವರ ಬಂಗಾರದಂಥ ಮಾತು— ಆದರೆ ?

ಸಮಾಜವಾದಿ ಪಕ್ಷದ ಗರಡಿಯಲ್ಲಿ ಪಳಗಿದ ಬಂಗಾರಪ್ಪನವರು ಇಂದಿರಾ ಗಾಂಧಿಯವರ "ಗರೀಬಿ ಹಟಾವೋ" "20 ಅಂಶ ಕಾರ್ಯಕ್ರಮ"ಗಳಿಗೆಲ್ಲ ಮರುಳಾಗಿ, ಕರ್ನಾಟಕ ರಾಜ್ಯದಲ್ಲಿ ಮಂತ್ರಿಗಳಾಗಿಯೂ, ಕೆ. ಪಿ. ಸಿ. ಸಿ. ಅಧ್ಯಕ್ಷರಾಗಿಯೂ ಮೆರೆದು, ಅಧಿಕಾರ ಲಾಲಸೆಯ ಗುಂಪುಗಳ ಪೈಪೋಟಿಯಲ್ಲಿ ತನ್ನ ಬೇಳೆ ಬೇಯಲಾರದಾದಾಗ ಇಂದಿರಾ ಕಾಂಗ್ರೆಸ್ಸನ್ನು ತ್ಯಜಿಸಿ, ದಿ। ದೇವರಾಜ ಅರಸರಂತೆಯೇ ಇಂದಿರಾ ಗಾಂಧಿಯ ಏಕವ್ಯಕ್ತಿ ಸರ್ವಾಧಿಕಾರದ ವಿರುದ್ಧ ಬಂಡೆದ್ದಿರುವುದು ಅತ್ಯಂತ ಸ್ವಾಗತಾರ್ಹ. ಕರ್ನಾಟಕದ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ, ಇಂದಿರಾ ಗಾಂಧಿಯ ಸರ್ವಾಧಿಕಾರದ ವಿರುದ್ಧ ಬಂಗಾರಪ್ಪನವರು ಕೈಗೊಂಡ ಕಾರ್ಯವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಹಾರ್ದಿಕವಾಗಿ ಸ್ವಾಗತಿಸುತ್ತದೆ.

"ತಾನೇ ನೇಮಿಸಿದ ಮುಖ್ಯ ಮಂತ್ರಿಗಳ ಮೂಲಕ ಅನುವಂಶಿಕ ಅಧಿಕಾರವನ್ನು ನಿರಂತರ ಸ್ಥಾಪಿಸುವುದೇ ಇಂದಿರಾ ಗಾಂಧಿಯವರ ಏಕೈಕ ಗುರಿ. ಇಂದಿರಾ ಗಾಂಧಿಯವರು ಎಲ್ಲಾ ಮೌಲ್ಯಗಳು ಮತ್ತು ಪ್ರಜಾಸತ್ತಾತ್ಮಕ ತತ್ವಗಳನ್ನು ಗಾಳಿಗೆ ತೂರಿದ್ದಾರೆ"ಂದು ಬಂಗಾರಪ್ಪನವರು ಹಲವಾರು ಊರುಗಳಲ್ಲಿ ಭಾಷಣ ಮಾಡುತ್ತಾ ಭೂಬಾಣ ಬಿಟ್ಟಿದ್ದಾರೆ. ಹತ್ತು ತಿಂಗಳು ಇಂದಿರಾ ಗಾಂಧಿಯ ಬಾಗಿಲು ಕಾಯುತ್ತಾ ಪ್ರವೇಶ ಸಿಗದ ಚಂದ್ರೇಗೌಡರೂ ಬಂಗಾರಪ್ಪನವರ ಬೆನ್ನು ಹತ್ತಿದ್ದಾರೆ

ಇಂದಿರಾ ಗಾಂಧಿಯ ಏಕವ್ಯಕ್ತಿ ಸರ್ವಾಧಿಕಾರಿ ಶಕ್ತಿಯನ್ನು ಸೋಲಿಸಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಒಂದಾಗಿ ಹೋರಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಕರೆಕೊಟ್ಟಿದೆ. ಅದರಂತೆ ರೈತರ–ಕಾರ್ಮಿಕರ ಹೋರಾಟಗಳನ್ನು, ಮತಪ್ರದರ್ಶನಗಳನ್ನು ನಡೆಸುವಲ್ಲಿ ಯಶಸ್ವಿಯಾಗಿದೆ. ಹಿಂದುಳಿದವರ, ಯುವಕರ ಹಾಗೂ ಕಾಂಗ್ರೆಯ ರಾಜಕೀಯಕ್ಕೆ ಬೇಸತ್ತ ಜನತೆ ಬಂಗಾರಪ್ಪನವರ ನೇತೃತ್ವದಲ್ಲಿ ಸಂಘಟಿತರಾಗುತ್ತಿರುವುದು ಕರ್ನಾಟಕದ ರಾಜಕೀಯದಲ್ಲಿ ಹೊಸ ತಿರುವನ್ನುಂಟು ಮಾಡಲು ಸಹಾಯವಾಗುವುದರಲ್ಲಿ ಸಂಶಯವಿಲ್ಲ. ಆದರೆ ಬಂಗಾರಪ್ಪನವರಿಗೆ ಒಂದು ಎಚ್ಚರಿಕೆಯ ಮಾತನ್ನು ಸಾರ್ವಜನಿಕ ಹಿತದ ದೃಷ್ಟಿಯಿಂದ ಹೇಳುವುದು ಅತ್ಯಗತ್ಯ.

ಡಾ। ರಾಮಮನೋಹರ ಲೋಹಿಯಾ, ಗೋಪಾಲಗೌಡರಂಥ ಸಮತಾವಾದಿ ಪಕ್ಷಗಳಲ್ಲಿ ಪಳಗಿದವರೆಲ್ಲ ಅಧಿಕಾರ ಲಾಲಸೆಯಿಂದಲೂ, ಇಂದಿರಾ ಗಾಂಧಿಯ ಬಣ್ಣದ ಘೋಷಣೆಗಳಿಗೆ ಬಲಿಯಾಗಿ ಹಲವಾರು ವರ್ಷಗಳಿಂದ ತಾವು ದುಡಿದು ಬೆಳೆಸಿದ, ಪಕ್ಷವನ್ನೂ ತಾವು ನಡೆಸಿದ ಧೀರ ಹೋರಾಟಗಳನ್ನೂ ಮರೆತು ಇಂದಿರಾ ರೇಲ್ವೆ ಹತ್ತಿದ್ದರು. ಅಲ್ಲಿ ಭ್ರಮೆ ನಿರಸನಗೊಂಡು ಗಾಡಿ ಇಳಿದು ಬಂದರು. ನಿಶ್ಚಿತ ಸಿದ್ಧಾಂತದ ಅಭಾವದಿಂದಾಗಿ ಮತ್ತೆ ಇಂದಿರಾ ಗಾಡಿ ಹತ್ತಿದ್ದರು. ಕಾಂಗ್ರೆಸ್ (ಎಸ್)ನ ಪ. ಬಂಗಾಲ, ಕೇರಳದ ಗತಿ ದುರ್ಗತಿಯಾಗಿದೆ ಅವರಿಗೆಲ್ಲ ಇಂದಿರಾ ಗಾಂಧಿಯ ಸರ್ವಾಧಿಕಾರ ಕೆಲವು ದಿವಸ ಬಹಳ ಅಪಾಯಕಾರಿಯಾಗಿ ಕಂಡು ಬಂದರೂ, ಆಕೆಯ ಒಳಸಂಚಿಗೆ ಬಲಿಯಾಗಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ವಿರೋಧವೇ ತಮ್ಮ ಪ್ರಥಮ ಗುರಿಯಾಗಿ ಮಾಡಿಕೊಂಡು, ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯಕತೆಗೆ ಅಡ್ಡಿಯನ್ನುಂಟುಮಾಡುತ್ತಿದ್ದಾರೆ.

ರೈತರ, ಕಾರ್ಮಿಕರ, ಯುವಜನತೆಯ ಹೋರಾಟಗಳಿಂದಲೇ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಸಾಧಿಸಿ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಹೇಳುತ್ತ ಬಂದಿದೆ. ಬರೀ ಅಧಿಕಾರದ ಆಸೆ, ಚುನಾವಣೆಯ ಹೊಂದಾಣಿಕೆಗಳಿಂದಷ್ಟೆ ಅಂಥ ಶಕ್ತಿಗಳನ್ನು ಬೆಳೆಸಿ ಮುಂದುವರಿಸುವುದು ಕಷ್ಟ. ಬಿ ಜೆ.ಪಿ., ಕಮ್ಯುನಿಸ್ಟ್ ಪಾರ್ಟಿಗಳನ್ನು ಸೇರಿಸಿಕೊಂಡು ಚುನಾವಣೆಯಲ್ಲಿ ಕಾಂಗ್ರೆ ವಿರುದ್ಧ ನೇರ ಸ್ಪರ್ಧೆಗೆ ಶಕ್ತಿ ಮೀರಿ ದುಡಿಯುವುದಾಗಿ ಬಂಗಾರಪ್ಪ ಸಾರಿದ್ದಾರೆ. ಈ ಮಿತಿಯಷ್ಟೇ ಸಲ್ಲವೆಂದು ನಮ್ಮ ಅಭಿಪ್ರಾಯ. ಜಾತೀಯತೆಗೆ ಪ್ರಚೋದನೆ ನೀಡುವ ಆರ್. ಎಸ್. ಎಸ್ ನ್ನೊಳಗೊಂಡ ಬಿ ಜೆ ಪಿ. ಜೊತೆಯಲ್ಲಿ ಚುನಾವಣಾ ಮೈತ್ರಿ ಮಾಡಿಕೊಳ್ಳುವುದೂ ಸರಿಯಲ್ಲವೆಂದು ನಮ್ಮ ಸ್ಪಷ್ಟ ನಿಲುವು. ಚುನಾವಣೆಯಲ್ಲಿ ಗೆದ್ದು ಅಧಿಕಾರ ನಡೆಸುವುದೊಂದೇ ಗುರಿಯನ್ನಿಟ್ಟುಕೊಂಡದ್ದಾದರೆ ಪೂರ್ಣ ಯಶಸ್ಸುಗಳಿಸುವುದು ಕಷ್ಟ ಸಾಧ್ಯ. ಚುನಾವಣೆಯ ಪೂರ್ವಭಾವಿಯಾಗಿ ಕರ್ನಾಟಕದ ಜನತೆಯನ್ನು, ರೈತ—ಕಾರ್ಮಿಕರನ್ನೆದುರಿಸುತ್ತಿರುವ ಹಲವಾರು ಸಮಸ್ಯೆಗಳ ಪರಿಹಾರಕ್ಕಾಗಿ ಸಂಯುಕ್ತ ಹೋರಾಟ ನಡೆಸುವುದು. ಅತ್ಯಗತ್ಯವೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಭಾವನೆ. ಹೋರಾಟದಿಂದಲೇ ಜನಜಾಗೃತಿಯಾಗಲು ಸಾಧ್ಯ. ದಿ। ದೇವರಾಜ ಅರಸರು ಹೇಳುತ್ತಿದ್ದಂತೆ, ಚರಿತ್ರಾರ್ಹವಾದ ರೈತ ಜಾಥಾ ಸಂಘಟಿಸಿದ್ದಂತೆ, ಬಂಗಾರಪ್ಪನವರು ಕೂಡ ಕನಿಷ್ಟ ಕಾರ್ಯಕ್ರಮದ ನೆಲೆಯಲ್ಲಿ ಎಲ್ಲಾ ವಿರೋಧಿ ಪಕ್ಷಗಳ ಜೊತೆಯಲ್ಲಿ ಸಂಯುಕ್ತರಂಗ ರಚಿಸಿ, ಹೋರಾಟಗಳ ಮೂಲಕ ಚುನಾವಣಾ ಕಣಕ್ಕಿಳಿಯುವುದು ಯಶಸ್ಸಿನ ದೃಷ್ಟಿಯಲ್ಲಿ ಯೋಗ್ಯವೆಂದು ನಮ್ಮ ಅಂಬೋಣ. ಈ ದಿಸೆಯಲ್ಲಿ ಪ್ರಯತ್ನ ನಡೆಯಲಿ.

ಮಂತ್ರಿ ಕ್ಷಮಾಯಾಚನೆ

ನಿಜಲಿಂಗಪ್ಪ, ಜತ್ತಿ ಮೊದಲಾದವರು ಮುಖ್ಯ ಮಂತ್ರಿಯಾಗಿದ್ದಾಗಲೇ ಬಾಂಗೂರ— ಸೋಮಾನಿಯವರ ದಾಂಡೇಲಿಯಲ್ಲಿರುವ ಕಾಗದ ಕಾರ್ಖಾನೆಗೆ ಅತಿ ಅಗ್ಗದರದಿಂದ ಮಲೆನಾಡಿನ ಬಿದಿರು ಕೊಟ್ಟ ಕಾರಣ ಅರಣ್ಯ ನಾಶವಾಗುತ್ತಿದೆಂಬ ಕೂಗು ಕೇಳುತ್ತಲೇ ಬಂದಿದ್ದೆವು. ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಯಾಗಿದ್ದಾಗ ಹರಿಹರದಲ್ಲಿ ಬಿರ್ಲಾರವರಿಗೆ ಫಾಲಿಫೈಬರ್ ಕಾರ್ಖಾನೆಗೆ ಬೇಕಾಗುವಷ್ಟು ಅರಣ್ಯದ ಮರಗಳನ್ನು ಅತ್ಯಂತ ಕಡಿಮೆ ದರದಲ್ಲಿ ಕೊಡಲಾಯಿತು. ಕಾಂಗ್ರೆಸ್ ಆಳ್ವಿಕೆಯಲ್ಲಿ, ಮಲೆನಾಡು ಅಭಿವೃದ್ಧಿಯಾಗದೆ, ಮಂತ್ರಿಗಳ, ಅರಣ್ಯ ಖಾತೆಯ, ಕಂಟ್ರಾಕ್ಟರರ ಲಾಭಖೋರ ನೀತಿಯಿಂದಾಗಿ ಅರಣ್ಯ ಬರಿದಾಗುತ್ತಿದೆಂಬ ತಕರಾರುಗಳನ್ನು ದಿನನಿತ್ಯ ವರ್ತಮಾನ ಪತ್ರಿಕೆಗಳಲ್ಲೂ, ವಿಧಾನ ಸಭೆಗಳೊಳಗೂ ಕೇಳುತ್ತಲೇ ಬರುತ್ತಿದ್ದೇವೆ. ಕಳೆದ 35 ವರ್ಷಗಳಲ್ಲಿ ಗುತ್ತೇದಾರಿ ಬಂಡವಾಳದಾರರಿಗೂ, ಕಂಟ್ರಾಕ್ಟರರಿಗೂ, ಕಟ್ಟಿಗೆ ಕಳ್ಳರಿಗೂ ಸಹಾಯ ಮಾಡಿದ ಯಾವ ಮಂತ್ರಿಯೂ ಮಾಫಿ ಬೇಡುವ ಅವಕಾಶ ಸಿಕ್ಕಿದ್ದಿಲ್ಲ ಆದರೆ ಈಗ ಗುಂಡೂರಾಯರ ಮಂತ್ರಿ ಮಂಡಲದಲ್ಲಿ ಅರಣ್ಯ ಸಚಿವರಾಗಿರುವ ಮಾದೇಗೌಡರು ವಿಧಾನ ಸಭೆಯಲ್ಲಿ ಕ್ಷಮಾಪಣೆ ಕೋರುವ ಸಂದರ್ಭ ಉಂಟಾಯಿತು. ಪ್ರದೇಶ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ (ಮಾಜಿ ಮಂತ್ರಿ ಇಬ್ರಾಹಿಂ ಅಲ್ಲ) ಅವರಿಗೆ ಕೊಡಗಿನ ಮೂರು ಸಾವಿರ ಎಕರೆ ಅರಣ್ಯ ಜಮೀನನ್ನು ಮರ ಕಡಿಯಲು ಗುತ್ತಿಗೆ ನೀಡಿರುವ ಪ್ರಕರಣದಲ್ಲಿ ಈ ಘಟನೆ ನಡೆಯಿತು.

ಈ ಪ್ರಕರಣ ಹೋದ ವರ್ಷದಿಂದಲೂ ಪತ್ರಿಕೆಗಳಲ್ಲಿ ಬೆಳಕು ಕಂಡಿತ್ತು. ಆಳುವ ಕಾಂಗ್ರೆ ಪಕ್ಷದ ಮುಖಂಡನಿಗೆ ಈ ವಿಷಯ ಸಂಬಂಧಿಸಿದ್ದುದರಿಂದ ಎಲ್ಲ ಹಂತದಲ್ಲೂ ಇದನ್ನು ಮುಚ್ಚಿಡಲು ಪ್ರಯತ್ನಿಸಲಾಯಿತು. ಆದರೆ ಈ ಸಲ ವಿಧಾನ ಸಭೆಯಲ್ಲಿ ವಿರೋಧಿ ಪಕ್ಷಗಳ ಪ್ರಯತ್ನದಿಂದ ಮಂತ್ರಿಗಳು ತಮ್ಮ ತಪ್ಪನ್ನು ಒಪ್ಪಿಕೊಳ್ಳಬೇಕಾಯಿತು.

ಅರಣ್ಯ ರಕ್ಷಣೆ ಎಷ್ಟು ಮಹತ್ವದ್ದೆಂಬುದನ್ನು ಅಂತರರಾಷ್ಟ್ರೀಯ ಸಂಘ–ಸಂಸ್ಥೆಗಳು ಹಲವಾರು ವರದಿಗಳಲ್ಲಿ ಒತ್ತಿ ಹೇಳುತ್ತ ಬಂದಿದ್ದರೂ, ಆಳುವ ಕಾಂಗ್ರೆ ಸರಕಾರಗಳು ಅದಕ್ಕೆ ಮಹತ್ವ ಕೊಡುತ್ತಿಲ್ಲ. ಕಾರಣ ಅರಣ್ಯ ಬರಡಾಗುತ್ತ ಹವಾಮಾನ,ಮಳೆಗಳಮೇಲೆ ಅದರಿಂದ ಹೆಚ್ಚು ಪರಿಣಾಮ ಉಂಟಾಗುತ್ತಿರುವುದನ್ನ ನೋಡುತ್ತಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಗುಂಡೂರಾವ್ ಸರಕಾರದ ಕಾರ್ಯನೀತಿ ಬಯಲಿಗೆ ಬಿದ್ದಿರುವುದು ಪ್ರಶಂಸನೀಯ. ಇಂಥ ಕೃತಿಗಳ ವಿರುದ್ಧ ಜನತೆ ಹೋರಾಡುವುದು ಅತೀ ಮಹತ್ವ.

●

ಸಂತಾಪ

15–7–82 ರಂದು ಮಂಗಳೂರಿನ ಬೋಳಾದಲ್ಲಿರುವ ಓರಿಯಂಟಲ್ ಹಂಚಿನ ಕಾರ್ಖಾನೆಯಲ್ಲಿ ಕೆಲಸಗಾರರಾಗಿದ್ದ ಬಿ.ನಾರಾಯಣಶೆಟ್ಟಿ ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ.

ಎಸ್. ಕೆ. ಟೈಲ್ಸ್ ವರ್ಕರ್ಸ್ ಯೂನಿಯನ್‌ನ ಸದಸ್ಯರಾಗಿದ್ದ ನಾರಾಯಣಶೆಟ್ಟಿಯವರ ನಿಧನಕ್ಕೆ ಓರಿಯಂಟಲ್ ಟೈಲ್ಸ್ ಕಾರ್ಖಾನೆಯ ಕೆಲಸಗಾರರು ಸಂತಾಪ ವ್ಯಕ್ತಪಡಿಸಿದ್ದಾರೆ.

●

ಯೇಸುವಿನ ಹೆಸರಿನಲ್ಲಿ....

ಇತ್ತೀಚಿಗೆ ಅಸ್ಸಾಂ ಮತ್ತಿತರ ಈಶಾನ್ಯಪೂರ್ವ ರಾಜ್ಯಗಳಲ್ಲಿ ಪ್ರತ್ಯೇಕವಾದಿ ಚಳವಳಿ ಬೆಳೆಯುತ್ತಿದ್ದು ಇದರ ಹಿಂದೆ ಸಾಮ್ರಾಜ್ಯಶಾಹಿಗಳ ಕೈವಾಡ ಇದ್ದುದು ನಿದರ್ಶನಕ್ಕೆ ಬಂದಿದೆ. ಸಾಮ್ರಾಜ್ಯಶಾಹಿ ಶಕ್ತಿಗಳು ಈ ಚಳವಳಿ ಪ್ರತ್ಯಕ್ಷ, ಅಪ್ರತ್ಯಕ್ಷ ಬೆಂಬಲ ನೀಡುತ್ತಿದ್ದು ದೇಶದ ಐಕ್ಯತೆ ಮತ್ತು ಸ್ವಾಯತ್ತೆಗೆ ಧಕ್ಕೆ ಬರುವ ರೀತಿಯಲ್ಲಿ ಕಾರ್ಯವೆಸಗುತ್ತಿವೆ. ಈ ಶಕ್ತಿಗಳಲ್ಲಿ ವಿದೇಶಿ ಮೂಲದ ಕ್ರಿಶ್ಚಿಯನ್ ಪಾದ್ರಿಗಳ ಪಾತ್ರ ಜೋರಾಗಿದೆ. ದೊರೆತ ಸಾಕ್ಷಾಧಾರಗಳ ರೀತ್ಯ 1979 ಜೂನ್‌ನಲ್ಲಿ ತ್ರಿಪುರಾದಲ್ಲಿ ನಡೆದ ಗಲಭೆಗಳಲ್ಲಿ 'ಬಾಪ್ಟಿಸ್ ಮಿಶನ್'ನ ಕೈವಾಡವಿದ್ದುದು ಸ್ಪಷ್ಟವಾಗಿದೆ

ಈ ವಿದೇಶಿ ಮಿಷಿನರಿಗಳು ಕಮ್ಯೂನಿಸ್ಟರ ಮೇಲೆ ಅದರಲ್ಲೂ ಸಿ ಪಿ.ಐ. (ಎಂ), ಸಿ.ಐ.ಟಿ.ಯು.ವಿನ ಮೇಲೆ ವಿಷಕಾರುತ್ತಿದ್ದಾರೆ. ಸಿ.ಪಿ ಐ (ಎಂ), ಸಿ.ಐ.ಟಿ.ಯು. ಮತ್ತಿತರ ಸಾಮೂಹಿಕ ಸಂಘಟನೆಗಳು ರೈತರು, ವಿದ್ಯಾರ್ಥಿಗಳು, ಯುವಕರು, ಮಹಿಳೆಯರನ್ನು ಸಂಘಟಿಸಿ ದೇಶದ ಐಕ್ಯತೆಗೆ ಮಾರಕವಾಗಿರುವ ಪ್ರತ್ಯೇಕವಾದಿ ಶಕ್ತಿಗಳಿಗೆ ಸವಾಲೊಡ್ಡುತ್ತಿರುವುದರಿಂದ ಕ್ರಿಶ್ಚಿಯನ್ ಮಿಷನರಿಗಳು ಸಿ.ಪಿ.ಐ (ಎಂ) ಕಾರ್ಯಕರ್ತರನ್ನೇ ತಮ್ಮ ದಾಳಿಗೆ ಕೇಂದ್ರವಾಗಿರಿಸಿಕೊಂಡಿವೆ. ಅನೇಕ ಸಿ ಪಿ ಐ (ಎಂ) ಕಾರ್ಯಕರ್ತರನ್ನು ಕೊಲೆಗೆಯ್ಯಲಾಗಿದೆ. ಸಿ.ಪಿ.ಐ.(ಎಂ) ಕಾರ್ಯಕರ್ತರು ತಮ್ಮ ಪ್ರಾಣವನ್ನೇ ಪಣಕ್ಕೊಡ್ಡಿ ಈ ಕುತಂತ್ರಗಳನ್ನು ತಡೆಗಟ್ಟಲು ಯತ್ನಿಸುತ್ತಿದ್ದಾರೆ.

ಅನೇಕ ದಿನಗಳಿಂದ ಅಸ್ಸಾಂ ಚಳವಳಿ ನಡೆಯುತ್ತಿದ್ದರೂ, ಕೇಂದ್ರ ಸರಕಾರ ಈ ಪ್ರಶ್ನೆಯನ್ನು ಬಗೆಹರಿಸಲು ವಿಫಲವಾಗಿರುವುದರ ಹಿನ್ನೆಲೆಯಲ್ಲಿ ವಿಚ್ಛಿದ್ರಕಾರಿ ಶಕ್ತಿಗಳು ದೇಶದ ಬೇರೆ ಭಾಗಗಳಲ್ಲೂ ತಲೆಯೆತ್ತುತ್ತಿದ್ದು, ಇತ್ತೀಚಿಗೆ ಬಹಿರಂಗವಾಗೇ ತಮ್ಮ ಕಾರ್ಯ ನಿರ್ವಹಿಸುತ್ತಿವೆ.

ಇತ್ತೀಚಿಗೆ ಅಸ್ಸಾಂನ ಸಲಾನಾ (ನೌಗಾಂವ್)ದಿಂದ ಕೆಥೋಲಿಕ್ ಚರ್ಚ್ ಕ್ರಿಶ್ಚಿಯನ್ ಮತಬಾಂಧವರಿಗೊಂದು ಸುತ್ತೋಲೆಯನ್ನು ಕಳಿಸಿರುವುದು ಬಹಿರಂಗವಾಗಿದೆ. ಈ ಕೆಳಗೆ (ಸಂಕ್ಷಿಪ್ತವಾಗಿ) ನಾವು ಈ ಸುತ್ತೋಲೆಯನ್ನು ಪ್ರಕಟಿಸುತ್ತಿದ್ದೇವೆ:

CATHOLIC MISSION
SALANA : NOWGONG
ASSAM-782139
Parish Letter for the Catholic Communities.

Ref PRSH/1 8/SM
4 4-82.

ಪ್ರಿಯ ಕ್ರಿಶ್ಚಿಯನ್ ಸೋದರ–ಸೋದರಿಯರೇ,

ಯೇಸು ಚಿರಾಯುವಾಗಲಿ!

1. ಪ್ರತಿ ವರ್ಷ ಮಿಶನ್ ವಾರ್ಷಿಕ ಸಮಾರಂಭ ನಡೆಸುತ್ತಿದೆ. ಎಲ್ಲ ಕ್ರಿಶ್ಚಿಯನ್ ಸೋದರ–ಸೋದರಿಯರು ಒಂದಾಗಿ ಯೇಸುವಿನ ಆರಾಧನೆ ಮಾಡುತ್ತಿರುವುದಕ್ಕೆ ಧನ್ಯವಾದ ಸಲ್ಲಿಸುತ್ತೇವೆ. ಸಮಾರಂಭದ ಸಮಯದಲ್ಲಿ ಪಾಲ್ಗೊಳ್ಳುವದರ ಮೂಲಕ ಯೇಸುವಿನಲ್ಲಿ ತಾವಿಟ್ಟಿರುವ ನಂಬಿಕೆಯನ್ನು ದೃಢಪಡಿಸುವದು ಅಗತ್ಯ

ಈ ವರ್ಷ ನಮ್ಮ ವಾರ್ಷಿಕ ಸಮಾರಂಭ (Annual-congregation) ಏಪ್ರಿಲ್ 24-25 ರಂದು ನಡೆಯಲಿದೆ. ಏಪ್ರಿಲ್ 24ರ ಶನಿವಾರವೇ ಮಿಶನ್‌ಗೆ ಹಾಜರಿರಬೇಕು. ಸಮಾರಂಭಕ್ಕೆ ಹಣಕಾಸಿನ ಖರ್ಚು ಬಹಳವಿರುವುದರಿಂದ ಪ್ರತಿಯೊಂದು ಕುಟುಂಬವು ಸಾಂಕೇತಿಕವಾಗಿ ತಲಾ 2 ರೂ. ಸಲ್ಲಿಸಬೇಕು. ತೋಟಗಳಲ್ಲಿ ಕೆಲಸಮಾಡುತ್ತಿರುವ ಕೆಲಸಗಾರರು ಒಂದು ದಿನ ರಜೆಗೋಸ್ಕರ ತಮ್ಮ ಮ್ಯಾನೇಜರರನ್ನು ಸಂಪರ್ಕಿಸಿ ರಜೆ ಪಡೆದು 24ರ ಬೆಳಿಗ್ಗೆಯೇ ಆಗಮಿಸಬೇಕು. ಮಿಶಿನ್‌ನಿಂದಲೇ ಈ ಕುರಿತು ಪತ್ರ ವಗೈರೆ ಬೇಕಿದ್ದರೆ ನಮ್ಮನ್ನು ಸಂಪರ್ಕಿಸಬೇಕು.

2. ಇಂದು ನಾವು ನಿಮಗೆ ವಿಶೇಷ ಮಾತೊಂದನ್ನು ತಿಳಿಸಲಪೇಕ್ಷಿಸುತ್ತೇವೆ. ಕ್ಯಾಥೊಲಿಕ್ ಚರ್ಚ್‌ಗಳ ಪ್ರಥಮ ಶತ್ರು ಸಮತಾವಾದ. ಕಾರಣ ಸಮಾಜವಾದಿ ರಾಷ್ಟ್ರಗಳಲ್ಲಿ ಕ್ರಿಶ್ಚಿಯನ್ ಪಾದರಿಗಳನ್ನು ಜೈಲಿನಲ್ಲಿ ಕೂಡುಹಾಕಲಾಗಿದೆ; ಇಲ್ಲವೆ ಕೊಲ್ಲಲಾಗುತ್ತಿದೆ. ಕಮ್ಯೂನಿಸ್ಟರು ಧರ್ಮವನ್ನೇ ತೊಡೆದುಹಾಕಲು ಯತ್ನಿಸುತ್ತಿದ್ದಾರೆ. ತಮ್ಮ ಪಕ್ಷವನ್ನು ಬಲಪಡಿಸಲು ಮಾತ್ರ ಕಮ್ಯುನಿಸ್ಟರು ಜನರಿಗೆ ಸಹಾಯ ಮಾಡುತ್ತಾರೆ. ತಪ್ಪಿಯೂ ಸಹ ಯಾವುದೇ ಕ್ಯಾಥೋಲಿಕ್‌ನು ಸಿ.ಪಿ.ಐ. ಮತ್ತು ಸಿ.ಪಿ ಐ (ಎಂ) ನೇತೃತ್ವದ ಯೂನಿಯನ್‌ಗಳಲ್ಲಿ ಸೇರಬಾರದು. ಸಮತಾವಾದವು ಮೂಲಭೂತವಾಗೇ ಧರ್ಮಕ್ಕೆ ವಿರೋಧವಿದೆ. ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದಾಗ ಎಲ್ಲ ಧರ್ಮಗಳನ್ನೂ, ಅದರಲ್ಲೂ ವಿಶೇಷವಾಗಿ ಕ್ಯಾಥೋಲಿಕ್ ಚರ್ಚುಗಳನ್ನೂ ಅವರು ತುಳಿಯುತ್ತಾರೆ. ಆದ್ದರಿಂದಲೇ ಯಾವ ಕ್ಯಾಥೋಲಿಕ್‌ರೂ ಕಮ್ಯೂನಿಸ್ಟರೊಂದಿಗೆ ಸಹಕರಿಸಬಾರದೆಂದು 'ಪೋಪ್' ಆಜ್ಞೆ ಮಾಡಿದ್ದಾರೆ. ನಮ್ಮ ದೇಶ (ಭಾರತ)ದಲ್ಲೂ ಇದೇ ಮಾತನ್ನು ಬಿಷಪ್ (Bishop)ಗಳು ಹೇಳುತ್ತಿರುವುದು. ಕಮ್ಯೂನಿಸ್ಟರ ನೇತೃತ್ವದ ಯೂನಿಯನ್ ಸೇರುವುದರಿಂದ ಆ ವ್ಯಕ್ತಿ ದಿವ್ಯಪ್ರಸಾದ(Sacramant)ಕ್ಕೆ ಅನರ್ಹನಾಗುತ್ತಾನೆ. ಯಾರು ಕಮ್ಯೂನಿಸ್ಟರ ನೇತೃತ್ವದ ಸಂಘಟನೆಯನ್ನು ಸೇರುವುದರಿಂದ ಆ ವ್ಯಕ್ತಿ ತನ್ನ ತಪ್ಪಿನ ಕಹಿ ಫಲವನ್ನು ಉಣ್ಣಬೇಕಾಗುತ್ತದೆ. ಕಮ್ಯೂನಿಸ್ಟರಿಗೆ ಮತ (Vote) ಹಾಕುವದಕ್ಕೆ, ಕಮ್ಯೂನಿಸ್ಟರೊಂದಿಗೆ ಸಹಕರಿಸುವದಕ್ಕೆ ಕ್ರಿಶ್ಚಿಯನ್ ಧರ್ಮ ಅವಕಾಶ ಕೊಡುವುದಿಲ್ಲ. ಇದು ನಮ್ಮ ಕ್ಷೇತ್ರಕ್ಕೆ ಮಾತ್ರ ಸೀಮಿತವಲ್ಲ. ಕೆಥೋಲಿಕ್ ಜಗತ್ತಿನಲ್ಲೆಲ್ಲ ಅನುಸರಿಸುತ್ತಿರುವುದು ಇದನ್ನೇ.

ಇನ್ನೂ ಯಾರಿಗಾದರೂ ಕಮ್ಯೂನಿಸ್ಟರ ಬಗ್ಗೆ ಸಹಾನುಭೂತಿ ಇದ್ದರೆ ಅವರು ಸೈತಾನನಗಳ ಕೈಗೊಂಬೆಗಳಾಗುವದು ಖಂಡಿತ. ದೇವರ ಪ್ರಾರ್ಥನೆಗೋಸ್ಕರ ಅವರು ಇದರಿಂದ ಬಿಡುಗಡೆ ಪಡೆಯುವದು ಅವಶ್ಯ.

ನಮ್ಮ ದೇಶದಲ್ಲಿ ಸಿ.ಪಿ.ಐ ಮತ್ತು ಸಿ ಪಿ.ಐ. (ಎಂ) ನೇತೃತ್ವದ ಕಾರ್ಮಿಕ ಸಂಘಟನೆಗಳನ್ನುಬಿಟ್ಟು ಇನ್ನೂ ಅನೇಕ ಕಾರ್ಮಿಕ ಸಂಘಟನೆಗಳಿವೆ. ನೀವುಗಳು ಆ ಸಂಘಟನೆಗಳನ್ನು ಸೇರಬಹುದು. ನಮ್ಮ ಉಪದೇಶವನ್ನು ಜೀವನ ಪರ್ಯಂತ ನೀವು ಜ್ಞಾಪಕದಲ್ಲಿಡಬೇಕು......

ನಿಮ್ಮೆಲ್ಲರಿಗೂ ಈಸ್ಟರ್(Easter) ಶುಭಾಷಯಗಳು.

ಕ್ರಿಸ್ತನ ಹೆಸರಿನಲ್ಲಿ ನಿಮ್ಮವ

Fr. Pallatty, M.
(Parish Priest)

Fr. Thomous, P.
(Asstt, Parish Priest)

ಯುದ್ಧದ ವಿರುದ್ಧ ದಂಗೆ ಎದ್ದಿರುವ ಜನ ಕೋಟಿ

ಪ್ರಪಂಚದ ಜನ ಯುದ್ಧಗಳಿಂದ ಬೇಸತ್ತು ಹೋಗಿದ್ದಾರೆ. ಯುದ್ಧಗಳು ರಾಜ್ಯಗಳ ನಡುವೆ ನಾನಾ ಕಾರಣಗಳಿಗಾಗಿ ಜರುಗುತ್ತವೆ. ಧಾರ್ಮಿಕ ಭಿನ್ನಾಭಿಪ್ರಾಯಗಳಿಗಾಗಿ ಇತಿಹಾಸದಲ್ಲಿ ಘೋರ ಯುದ್ಧಗಳು ಜರುಗಿವೆ. ಇಪ್ಪತ್ತನೇ ಶತಮಾನದಲ್ಲಿ ಇತರರ ಸಂಪನ್ಮೂಲಗಳನ್ನು ದೋಚಲು ಪ್ರಪಂಚದಲ್ಲಿ ವಸಾಹತುಗಳನ್ನು ಹಂಚಿಕೊಳ್ಳಲು ಎರಡು ಜಾಗತಿಕ ಯುದ್ಧ ಜರಗಿದುವು. ಹೀಗೆ ಕಳೆದ ಐದೂವರೆ ಸಾವಿರ ವರ್ಷಗಳಲ್ಲಿ ಇತಿಹಾಸದಲ್ಲಿ 14,000 ಯುದ್ಧಗಳು ಸಂಭವಿಸಿವೆ.

ಇತಿಹಾಸ ಓದಿದವರಿಗೆ ಕ್ರಿಸ್ತಪೂರ್ವ 490ರಲ್ಲಿ ಪರ್ಶಿಯ ಮತ್ತು ಅಥೆನ್ಸ್‌ಗಳ ನಡುವೆ ಸುದೀರ್ಘ ಕಾಲ ಯುದ್ಧ ನಡೆದ ವಿಷಯ ತಿಳಿದಿದೆ. ಆಗ ಎರಡೂ ಕಡೆ ಸುಮಾರು 4 ರಿಂದ 6 ಸಾವಿರ ಮಂದಿ ಯೋಧರಿದ್ದರು. ಮ್ಯಾರಥಾನ್‌ನಲ್ಲಿ ಜರುಗಿದ ಈ ಯುದ್ಧದಲ್ಲಿ ಅಥೀನಿಯನ್ನರು 200 ಯೋಧರನ್ನು ಕಳೆದುಕೊಂಡರು.

ಮೊದಲನೆಯ ಜಾಗತಿಕ ಯುದ್ಧ 74 ಮಿಲಿಯ ಜನರನ್ನು ಆವರಿಸಿತ್ತು. 2000 ಕೀಲೋ ಮೀಟರುಗಳ ಪ್ರದೇಶದಲ್ಲಿ 10 ಮಿಲಿಯ ಜನರು ಮಡಿದರು.

ಇಪ್ಪತ್ತು ವರ್ಷಗಳ ನಂತರ ಜರುಗಿದ ಎರಡನೇ ಮಹಾಯುದ್ಧದಲ್ಲಿ 61 ರಾಷ್ಟ್ರಗಳು ಭಾಗವಹಿಸಿದ್ದವು. 110 ಮಿಲಿಯ ಯೋಧರು ಕದನದಲ್ಲಿ ತೊಡಗಿದ್ದರು. 54 ಮಿಲಿಯ ಜನರು ಮಡಿದರು ಮತ್ತು 90 ಮಿಲಿಯ ಜನ ಗಾಯಗೊಂಡರು.

ಹಾಗಿದ್ದರೂ, ಈಗಿನ ನ್ಯೂಕ್ಲಿಯರ್ ಆಯುಧಗಳನ್ನು ಗಣನೆಗೆ ತೆಗೆದುಕೊಂಡರೆ ಹಿಂದಿನ ಯುದ್ಧಗಳೆಲ್ಲವನ್ನೂ 'ಸೀಮಿತ ಯುದ್ಧಗಳು' ಎಂದು ಹೇಳಬಹುದು. ಸಾಂಪ್ರದಾಯಿಕ ಆಯುಧಗಳಿಗೆ ಹೋಲಿಸಿದಲ್ಲಿ, ನ್ಯೂಕ್ಲಿಯರ್ ಆಯುಧಗಳು ಸರ್ವನಾಶ ಉಂಟುಮಾಡುವಂಥವು.

ಇಂದು ಈ ಜಗತ್ತಿನಲ್ಲಿರುವ 5000 ಮಿಲಿಯ ಜನರಿಗೆ ತಲಾ ಒಂದರಂತೆ 15 ಟನ್ ಆಸ್ಫೋಟಕ್ಕೆ ಸಮನಾದ ನ್ಯೂಕ್ಲಿಯರ್ ಶಕ್ತಿ ಇದೆ. ಇದು ಯಾರಿಗೂ ಗಾಬರಿ ಹುಟ್ಟಿಸುವಂಥದ್ದು.

ಉದಾಹರಣೆಗೆ 1870–71ರಲ್ಲಿ ಜರುಗಿದ ಫ್ರಾಂಕೋಜರ್ಮನ್ ಯುದ್ಧದಲ್ಲಿ ಸಾವಿಗೀಡಾದ ಯೋಧರು ಮತ್ತು ನಾಗರಿಕರ ಪ್ರಮಾಣವನ್ನು ತೆಗೆದುಕೊಳ್ಳೋಣ. ಅದು 98:2 ಆಗಿತ್ತು. ಆದರೆ ಮೊದಲನೇ ಜಾಗತಿಕ ಯುದ್ಧದಲ್ಲಿ ಅದು 52:48ಕ್ಕೆ ಬದಲಾಯಿತು. ಎರಡನೇ ಜಾಗತಿಕ ಯುದ್ಧದಲ್ಲಿ ಅದು 24.76 ಆಯಿತು. ವಿಯೆಟ್ನಾಮ್ ಯುದ್ಧದಲ್ಲಿ ಈ ಪ್ರಮಾಣವು 2.98 ಆಯಿತು ಇದನ್ನು ನೋಡಿದರೆ, ಭಾವೀ ಯುದ್ಧದಲ್ಲಿ ಯೋಧರಾಗುವುದೇ ಕ್ಷೇಮವೆಂದು ತೋರುತ್ತದೆ.

ಹಾಗಿರುವಾಗ, ಇನ್ನೊಂದು ಯುದ್ಧವನ್ನು ಪ್ರಾರಂಭಿಸಲು ಆತುರರಾಗಿರುವವರು ಯಾರ ಸರ್ವನಾಶ ಉಂಟುಮಾಡುವುದಕ್ಕೆ? ಮಿಲಿಟರಿ ಶ್ರೇಷ್ಠತೆಯನ್ನು ಪಡೆದುಕೊಳ್ಳಬಯಸುತ್ತಿರುವವರು, ಮಾರಕಾಸ್ತ್ರಗಳನ್ನು ತಯಾರಿಸುವುದರಿಂದ ಹೇರಳವಾಗಿ ಲಾಭ ಪಡೆಯುತ್ತಿರುವವರು, ಅಮೇರಿಕದ ಆಡಳಿತೆಯಲ್ಲಿ ಅಧಿಕಾರ ಸ್ಥಾನಗಳಲ್ಲಿದ್ದು ಮಿಲಿಟರಿ ಕೈಗಾರಿಕಾ ಸಂಕೀರ್ಣದ ಅಧೀನದಲ್ಲಿರುವವರು, ಹೊಸ ಯುದ್ಧವನ್ನು ಬಯಸುತ್ತಿದ್ದಾರೆ.

ಈ ಹುಚ್ಚುತನಕ್ಕೆ ಯೂರೋಪು, ಏಶಿಯ, ಅಮೇರಿಕಾದ ಕೋಟಿ ಕೋಟಿ ಜನರು ಬಲಿಯಾಗಬೇಕೆ? ಖಂಡಿತ ಇಲ್ಲ. ಜನ ಇದಕ್ಕೆ ಸಿದ್ಧವಾಗಿಲ್ಲ.

ಅದರಿಂದಾಗಿಯೇ ಜಗತ್ತಿನಾದ್ಯಂತ ಇಂದು ಯುದ್ಧಕ್ಕೆ ವಿರೋಧವಾಗಿ ದೊಡ್ಡ ಚಳವಳಿ ಪ್ರಾರಂಭವಾಗಿದೆ. ಲಕ್ಷೋಪ ಲಕ್ಷ ಜನ ಯುದ್ಧ ವಿರೋಧಿ ಘೋಷಣೆಗಳನ್ನು ಕೂಗುತ್ತ ಪ್ರದರ್ಶನಗಳನ್ನು ನಡೆಸುತ್ತಿದ್ದಾರೆ.

ಶಾಂತಿಗಾಗಿ ಪಂಜಿನ ಒಲಿಂಪಿಕ್ ರಿಲೇ ಪ್ರಾರಂಭವಾಗಿದೆ. ಅದು ಅಟ್ಲಾಂಟಿಕ್ ಹಾಯ್ದು ಯುಗೋಸ್ಲಾವಿಯಾ, ಇಟಲಿ, ಫ್ರಾನ್ಸ್, ಸ್ಪೇನ್ ಮತ್ತು ಪೋರ್ಚುಗಲ್ ಮಾರ್ಗವಾಗಿ, ಮಾಂಟ್ರಿಯಲ್ ತಲುಪಿ, ಅಲ್ಲಿಂದ ನ್ಯೂ ಯಾರ್ಕ್‌ಗೆ ಹೋಗಲಿದೆ. ಇನ್ನೊಂದು ಕಡೆಯಿಂದ ಯೂರೋಪಿನ ಸಮಾಜವಾದೀ ದೇಶಗಳನ್ನು ಹಾದು ಬಾನ್ ತಲುಪಲಿದೆ. ಉದ್ದೇಶ ಯುದ್ಧವನ್ನು ವಿರೋಧಿಸಿ ಶಾಂತಿ ಸಂದೇಶವನ್ನು ಸಾರುವುದಾಗಿದೆ ಈ ಮಧ್ಯೆ 4 ಮಿಲಿಯ ಜಪಾನೀಯರು ಪ್ರದರ್ಶನಗಳನ್ನು ನಡೆಸಿ ನ್ಯೂಕ್ಲಿಯರ್ ಅಸ್ತ್ರಗಳ ನಿರ್ಮೂಲನಕ್ಕಾಗಿ, ಯುದ್ಧ ಸಿದ್ಧತೆಗಳ ವಿರುದ್ಧವಾಗಿ 40 ಮಿಲಿಯ ಸಹಿಗಳನ್ನು ಸಂಗ್ರಹಿಸಿದ್ದಾರೆ.

ಇತಿಹಾಸದಲ್ಲಿ ಹಿಂದೆಂದೂ ಮಾನವ ಕುಲ ಈ ಪ್ರಮಾಣದಲ್ಲಿ ಯುದ್ಧಕ್ಕೆ ವಿರೋಧವಾಗಿ ಚಳವಳಿ ನಡೆಸಿದ್ದಿಲ್ಲ. ಜನತೆಗೆ ವಿಜಯ ಖಂಡಿತ.

—ಎ. ಎಸ್. ಮೂರ್ತಿ

['ಸೋವಿಯತ್' ವಾರ್ತಾ ಇಲಾಖೆಯ ಸೌಜನ್ಯ]

ಮೈಸೂರು :

"ಹೋರಾಟವೊಂದೇ ಮಾರ್ಗ"---

ಕಾಂ. ಎಂ. ಎ. ಬೇಬಿ

ಜುಲೈ 16, 17 ರಂದು ಮೈಸೂರಿನಲ್ಲಿ ನಡೆದ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್. ಎಫ್. ಐ.) ಕರ್ನಾಟಕ ರಾಜ್ಯ ಸಮಿತಿ ಸಭೆಯ ಕೊನೆಯ ಅಂಗವಾಗಿ 17-7-82 ರಂದು ಮೈಸೂರು ಎಸ್.ಎಫ್.ಐ. ಘಟಕವು ಇಲ್ಲಿನ ಮಹರಾಜಾ ಕಾಲೇಜಿನ ಜ್ಯೂನಿಯರ್ ಬಿ.ಎ. ಸಭಾಂಗಣದಲ್ಲಿ ವಿದ್ಯಾರ್ಥಿಗಳ ಸಭೆಯೊಂದನ್ನು ನಡೆಸಿತು. ಸಭೆಯ ಅಧ್ಯಕ್ಷತೆಯನ್ನು ಮೈಸೂರು ಎಸ್.ಎಫ್.ಐ. ಘಟಕದ ಅಧ್ಯಕ್ಷರಾದ ಕಾಂ|| ಸಲೀಲ್ ಗೋಪಿನಾಥ್ ವಹಿಸಿದ್ದರು.

ಸಭೆಯಲ್ಲಿ ಮುಖ್ಯ ಭಾಷಣ ಮಾಡಿದ ಎಸ್. ಎಫ್. ಐ. ಅಖಿಲ ಭಾರತ ಅಧ್ಯಕ್ಷರಾದ ಕಾಂ| ಎಂ. ಎ. ಬೇಬಿಯವರು ವಿದ್ಯಾರ್ಥಿಗಳು ಸಂಘಟಿತರಾಗಿ ಹೋರಾಡಿದಲ್ಲಿ ಮಾತ್ರ ಅವರುಗಳ ಬೇಡಿಕೆಗಳು ಈಡೇರಲು ಸಾಧ್ಯವೆಂದರು. ಬಲಿಷ್ಠ ಪ್ರಜಾಪ್ರಭುತ್ವವಾದಿ ವಿದ್ಯಾರ್ಥಿ ಸಂಘಟನೆಗಳಿದ್ದೆಡೆ ಮಾತ್ರ ಶೈಕ್ಷಣಿಕ ಕ್ಷೇತ್ರ ಉತ್ತಮ ಮಟ್ಟದಲ್ಲಿ ನಡೆಯುತ್ತಿದ್ದು ಇದು "ವಿದ್ಯಾರ್ಥಿ ಸಂಘಟನೆಗಳನ್ನು ನಿಶೇಧಿಸಬೇಕೆನ್ನುವ" ಯು. ಜಿ. ಸಿ. ಅಧ್ಯಕ್ಷೆ ಮಾಧುರಿ ಶ್ರೀ ರಂತಹವರಿಗೆ ಉತ್ತರವೆಂದು ಹೇಳಿದರು. ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಚುನಾವಣೆಗಳನ್ನು ರದ್ದುಗೊಳಿಸಿರುವುದನ್ನು ತೀವ್ರವಾಗಿ ಖಂಡಿಸಿದರು. "ನಮ್ಮ ದೇಶಕ್ಕೆ ಸ್ವಾತಂತ್ರ ಬಂದಿರುವುದು ಜನತೆಯ ಹೋರಾಟದಿಂದ. ಗಾಂಧೀಜಿಯವರ ನಗ್ನ ದೇಹ ನೋಡಿ ಕರುಣೆ ತೋರಿ ಬ್ರಿಟೀಷರು ನಮಗೆ ಸ್ವಾತಂತ್ರ್ಯ 'ದಯಪಾಲಿಸಿದ್ದಲ್ಲ'. ಈ ವಾಸ್ತವನನ್ನು ನಮ್ಮ ಚರಿತ್ರೆ ಪುಸ್ತಕಗಳಲ್ಲಿ ವಿಕೃತಗೊಳಿಸಲಾಗಿದೆ. ಇಂದೂ ನಮ್ಮ ದೇಶದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾದಲ್ಲಿ ಹೋರಾಟದಿಂದ ಮಾತ್ರ ಸಾಧ್ಯ" ಎಂದು ಕಾಂ| ಎಂ. ಎ. ಬೇಬಿ ಹೇಳಿದರು.

ಸಭೆಯಲ್ಲಿ ರಾಜ್ಯ ಎಸ್.ಎಫ್.ಐ. ಅಧ್ಯಕ್ಷರಾದ ಕಾಂ| ಆರ್. ಜಯ್ ಕುಮಾರ್, ಪ್ರಧಾನ ಕಾರ್ಯದರ್ಶಿ ಕಾಂ| ಎಸ್. ಆರ್. ಆರಾಧ್ಯರವರೂ ಮಾತನಾಡಿದರು. ಮೊದಲಿಗೆ ಕಾಂ| ಪುರುಶೋತ್ತಮ್ ಸ್ವಾಗತಿಸಿದರು. ಕೊನೆಯಲ್ಲಿ ಕಾಂ| ರಮಣಾರೆಡ್ಡಿ ಧನ್ಯವಾದವಿತ್ತರು.

ಕೃತಜ್ಞತೆ :

ಮೈಸೂರು ಎಸ್.ಎಫ್.ಐ. ಘಟಕದ ಕಾರ್ಯದರ್ಶಿ ಕಾಂ| ಜಯಸಿಂಹರವರು ನಗರದಲ್ಲಿ ಎಸ್.ಎಫ್.ಐ ರಾಜ್ಯ ಸಮಿತಿ ಸಭೆಯನ್ನು ಯಶಸ್ವಿಯಾಗಿ ನಡೆಸಲು ನೆರವಾದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದ್ದಾರೆ.

[ಜುಲೈ 16, 17 ರಂದು ಮೈಸೂರಿನಲ್ಲಿ ನಡೆದ ಎಸ್.ಎಫ್.ಐ. ರಾಜ್ಯ ಸಮಿತಿ ವಿಸ್ತೃತ ಸಭೆಯು ಕೈಕೊಂಡ ನಿರ್ಣಯಗಳನ್ನು ಮುಂದಿನವಾರ ಪ್ರಕಟಿಸಲಾಗುವುದು.]

○

ಭಾಷಾ ನೀತಿಯ ಬಗ್ಗೆ ಎಸ್.ಎಫ್.ಐ. ನಿಲುವು

ಜುಲೈ 16, 17 ರಂದು ಮೈಸೂರಿನಲ್ಲಿ ನಡೆದ ಎಸ್ ಎಫ್.ಐ. ರಾಜ್ಯ ಸಮಿತಿ ಸಭೆಯ ವಿಸ್ತೃತ ಸಭೆಯಲ್ಲಿ ಅಂಗೀಕರಿಸಲಾದ ಭಾಷಾ ಸಮಸ್ಯೆ ಬಗೆಗಿನ ನಿರ್ಣಯ :—

ಕರ್ನಾಟಕ ರಾಜ್ಯ ಸರಕಾರದ ಭಾಷಾ ನೀತಿ ಬಗ್ಗೆ :

ಕರ್ನಾಟಕದಲ್ಲಿ ಭಾಷಾ ಪ್ರಶ್ನೆಯ ಬಗ್ಗೆ ಎದ್ದಿರುವ ವಿವಾದವನ್ನು ರಾಜ್ಯ ಸಮಿತಿ ಸಭೆಯು ಗಂಭೀರ ಪರಿಗಣನೆಗೆ ತೆಗೆದುಕೊಂಡಿತು. ಕನ್ನಡಿಗರು ಮತ್ತು ಕನ್ನಡೇತರರ ನಡುವೆ ಉಂಟಾಗಿರುವ ವೈಮನಸ್ಯಕ್ಕೆ ಸಭೆಯು ವಿಷಾದ ವ್ಯಕ್ತಪಡಿಸಿತು. ಸ್ವಾತಂತ್ರನಂತರ ಕಾಂಗ್ರೆಸ್ ಸರಕಾರವು ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಸರಿಯಾದ ಅವಕಾಶ ನೀಡದಿದ್ದುದರ ಪರಿಣಾಮದಲ್ಲಿ ಕರ್ನಾಟಕ ಭಾಷಾ ಚಳುವಳಿಯು ಒಂದು. ಕರ್ನಾಟಕದಲ್ಲಿ ಆಡಳಿತ ಮತ್ತು ಶಿಕ್ಷಣ ರಂಗಗಳಿಂದ ಇಂಗ್ಲೀಷ್ ಭಾಷೆಯ ಸಾರ್ವಭೌಮತ್ವವನ್ನು ಕೊನೆಗಾಣಿಸದ ಹೊರತು ಕನ್ನಡದ ಬೆಳವಣಿಗೆ ಸಾಧಿಸಲು ಸಾಧ್ಯವಿಲ್ಲ. ಕನ್ನಡ ಭಾಷೆಯ ಬೆಳವಣಿಗೆಗೆ ಮುಖ್ಯವಾಗಿ ಅಡ್ಡಿಯಾಗಿರುವುದು ಇಂಗ್ಲೀಷ್ ಭಾಷೆಯೇ ಹೊರತು ಇತರ ಅಲ್ಪಸಂಖ್ಯಾತರ ಭಾಷೆಗಳಲ್ಲ. ಆದ್ದರಿಂದ ಭಾಷಾ ಅಲ್ಪಸಂಖ್ಯೇತರ ಮೇಲೆ ಕನ್ನಡ ಭಾಷೆಯನ್ನು ಯಾಂತ್ರಿಕವಾಗಿ ಹೇರುವುದರಿಂದ ಕನ್ನಡ ಭಾಷೆಯ ಬೆಳವಣಿಗೆ ಸಾಧಿಸಲಾಗುವುದಿಲ್ಲ. ಬದಲಾಗಿ ಇದರಿಂದ ವಿವಿಧ ಭಾಷಾ ಜನಾಂಗಗಳ ಐಕ್ಯತೆಗೆ ಮತ್ತು ರಾಷ್ಟ್ರೀಯ ಸಮಗ್ರತೆಗೆ ಗಂಡಾಂತರ ಒದಗಲಿದೆ

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರಕಾರವು ಪ್ರಥಮ ಭಾಷೆಯಾಗಿ ಕನ್ನಡವನ್ನು ಅಲ್ಪಸಂಖ್ಯಾತರ ಮೇಲೆ ಕಡ್ಡಾಯವಾಗಿ ಹೇರುವ ನೀತಿಯು ಪ್ರಜಾಪ್ರಭುತ್ವ ಕ್ರಮವಲ್ಲವೆಂದು ಸಭೆಯು ಅಭಿಪ್ರಾಯಪಟ್ಟಿತು. ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಜಾರಿಗೊಳಿಸಲು ಮತ್ತು ಮತ್ತು ಕನ್ನಡಿಗ ಹಾಗೂ ಕನ್ನಡೇತರ ವಿದ್ಯಾರ್ಥಿಗಳೆಲ್ಲರಿಗೂ ತಮ್ಮ ಮಾತೃ ಭಾಷೆಯಲ್ಲೇ ವಿಶ್ವವಿದ್ಯಾಲಯ ಹಂತದವರೆಗೆ ಶಿಕ್ಷಣ ಪಡೆಯಲು ಅವಕಾಶ ಒದಗಿಸುವಂತೆ ಕರ್ನಾಟಕ ರಾಜ್ಯ ಸರಕಾರವನ್ನು ಎಸ್.ಎಫ್.ಐ. ಒತ್ತಾಯಿಸುತ್ತದೆ. ಕರ್ನಾಟಕದ ಎಲ್ಲಾ ಕಾಲೇಜುಗಳಲ್ಲಿ ಕನಿಷ್ಠ ಬಿ.ಎ. ತರಗತಿಗಳಿಗಾದರೂ ಕನ್ನಡ ಮಾಧ್ಯಮ ವಿಭಾಗಗಳನ್ನು ತಕ್ಷಣ ಕಡ್ಡಾಯಗೊಳಿಸಿ ಆಜ್ಞೆ ಹೊರಡಿಬೇಕೆಂದು ರಾಜ್ಯ ಸರಕಾರವನ್ನು ಎಸ್.ಎಫ್.ಐ. ಒತ್ತಾಯಿಸುತ್ತದೆ. ಮತ್ತು ಮೇಲ್ಕಂಡ ಬೇಡಿಕೆಗಳಿಗಾಗಿ ಇತರೇ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಸೇರಿ ಹೋರಾಟವನ್ನು ರೂಪಿಸುತ್ತದೆ.

●

ಶಿವಮೊಗ್ಗ :

ಆಸ್ಪತ್ರೆಯ ದುರ್ವ್ಯವಸ್ಥೆಯ ಕುರಿತು ಡಿ. ವೈ. ಎಫ್. ಐ. ಮನವಿ

ಶಿವಮೊಗ್ಗೆಯ ಮೆಗ್ಗಾನ ಆಸ್ಪತ್ರೆಯ ದುರ್ವ್ಯವಸ್ಥೆಯ ಕುರಿತು ಸ್ಥಳೀಯ ಡಿ. ವೈ ಎಫ್. ಐ. ಘಟಕದ ಅಧ್ಯಕ್ಷ ಕಾಂ| ತಿರುಕಪ್ಪನವರ ನೇತೃತ್ವದಲ್ಲಿ ಜಿಲ್ಲಾ ಸರ್ಜನ್‌ರಲ್ಲಿ ನಿಯೋಗವೊಂದು ತೆರಳಿತ್ತು.

ಮನವಿಯಲ್ಲಿನ ಬೇಡಿಕೆಗಳು :

(1) ಲಂಚ, ರುಷವತ್ತುಗಳನ್ನು ಯೋಜಿತ ಕಾರ್ಯಕ್ರಮ ಹಾಕಿ ತಡೆಗಟ್ಟುವದು.

(2) ರೋಗಿಗಳಿಗೆ ಮಾತ್ರೆ. ಟಾನಿಕ್, ಗ್ಲುಕೋಸ್ ಇವು ಇದ್ದಾಗಲೂ ಬೇರೆ ಕಡೆಯಿಂದ ತರಿಸಿ ಎಂದು ಹೇಳುವ ವ್ಯವಸ್ಥೆ ಬದಲು, ತುರ್ತಾಗಿ ಅವಶ್ಯಕವಾಗಿರುವ ಗ್ಲುಕೋಸ್, ಮಾತ್ರೆ ಇತ್ಯಾದಿ ಕೂಡಲೇ ಉಚಿತವಾಗಿ ಕೊಡುವ ವ್ಯವಸ್ಥೆ ಆಗಬೇಕು.

(3) ಚುಚ್ಚುಮದ್ದು ವಿಭಾಗ (ನಂ. 2)ದಲ್ಲಿ ಅವ್ಯವಸ್ಥೆ ಸರಿಪಡಿಸಬೇಕು.

(4) ವಾರ್ಡಿನಲ್ಲಿ ರೋಗಿಗಳನ್ನು ನೆಲದ ಮೇಲೆ ಮಲಗಿಸಲಾಗುತ್ತಿದೆ. ಸೊಳ್ಳೆಕಾಟ ವಿಪರೀತ. ಕೈ ಬೆಚ್ಚಗೆ ಮಾಡಿದರೆ ಉತ್ತಮ ವಾರ್ಡಿನ ವ್ಯವಸ್ಥೆ ಉಂಟು...ಇತ್ಯಾದಿ.

ಈ ಮನವಿಯ ಕುರಿತು ನಿಯೋಗದೊಂದಿಗೆ ಚರ್ಚಿಸಿದ ಜಿಲ್ಲಾ ಸರ್ಜನ್ ಡಾ| ಶಿವಾನಂದಪ್ಪನವರು ಸಮಸ್ಯೆಗಳಿರುವುದು ನಿಜವೆಂದು ಒಪ್ಪಿಕೊಂಡು, ಪರಿಹಾರಕ್ಕೆ ಶೀಘ್ರವಾಗಿ ಪ್ರಯತ್ನಿಸುವ ಭರವಸೆ ನೀಡಿದ್ದಾರೆ.

●

ಕೇರಳ :

ಕರುಣಾಕರನ್ ದರ್ಬಾರಿನಲ್ಲಿ....

* ಜೂನ್ 23ರಂದು 'ಕರ್ಷಕ ರಕ್ಷ ಸಮಿತಿ' ಎಂಬ ಸಂಸ್ಥೆಯ ಕೆಲವು ಸಮಾಜ ದ್ರೋಹಿಗಳು ಕ್ಯಾಲಿಕಟ್ ಜಿಲ್ಲೆಯ ಒಂದು ಹಳ್ಳಿಯಲ್ಲಿ ಒಂದು ಬಡರೈತ ಕುಟುಂಬದ ಮನೆ ನುಗ್ಗಿ ಹಲ್ಲೆ ಮಾಡಿದ್ದಾರೆ ಬೆಳೆದು ನಿಂತ ಪೈರನ್ನು ನಾಶ ಮಾಡಿದ್ದಾರೆ.

* ಕಾಂಗ್ರೆಸ್ (ಐ) ಕಾರ್ಯಕರ್ತನೊಬ್ಬ ತನ್ನ ಮನೆ ನುಗ್ಗಿ ಹೊಡೆದನೆಂದು ಒಬ್ಬ ಮಹಿಳೆ ಕುಂದಾರಾ ಪೋಲೀಸ್ ಸ್ಟೇಶನ್‌ಗೆ ಹೋಗಿ ದೂರು ನೀಡಿದಾಗ ಅಲ್ಲಿದ್ದ ಸಬ್ ಇನ್ಸ್‌ಪೆಕ್ಟರ್ ಆಕೆಯನ್ನು ಬೂಟುಗಾಲಿನಿಂದ ಒದ್ದ ಪರಿಣಾಮವಾಗಿ ಆಕೆಯನ್ನು ಆಸ್ಪತ್ರೆಗೆ ಸೇರಿಸಬೇಕಾಗಿ ಬಂದಿದೆ.

* ಕ್ವಿಲಾನ್ ಜಿಲ್ಲೆಯಲ್ಲಿ ಆರ್. ಎಸ್. ಎಸ್. ಗೂಂಡಾಗಳು ಜೂನ್ 23ರ ಬೆಳಿಗ್ಗೆ ಕುಲಶೇಖರಂ ಹೈಸ್ಕೂಲ್‌ಗೆ ನುಗ್ಗಿ ಹಲ್ಲೆ ನಡೆಸಿರುವುದರಿಂದ ನಾಲ್ಕು ವಿದ್ಯಾರ್ಥಿಗಳು ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿದ್ದಾರೆ.

* ಅಲೆಪ್ಪಿ ಜಿಲ್ಲೆಯಲ್ಲಿ ಡಿ ವೈ ಎಫ್. ಐ ಕಾರ್ಯಕರ್ತನೊಬ್ಬ ಆಸ್ಪತ್ರೆಯಿಂದ ಔಷಧಿ ತೆಗೆದುಕೊಂಡು ವಾಪಾಸು ಬರುವಾಗ ಕಾಂಗ್ರೆಸ್ (ಐ) ಗೂಂಡಾಗಳು ಕಬ್ಬಿಣದ ಸಲಾಕೆಗಳಿಂದ ಹಲ್ಲೆ ನಡೆಸಿದರು

* ಚೇರ್ಥುವೈಪುರ್ ಎಂಬ ಹಳ್ಳಿ (ಅಲೆಪ್ಪಿ ಜಿಲ್ಲೆ) ಯಲ್ಲಿ ಶಂಕಪ್ಪನ್ ಎಂಬ ಹರಿಜನ ಯುವಕನ ಮೇಲೆ ಗೂಂಡಾಗಳು ಜೂನ್ 20 ರಂದು ಕಲ್ಲು ತೂರಿದ್ದರಿಂದ ಗಾಯಗೊಂಡು ಜೂನ್ 24 ರಂದು ಆಸ್ಪತ್ರೆಯಲ್ಲಿ ಆತ ಅಸು ನೀಗಿದ.

* ಮಾವೇಲಿಕ್ಕಾರದಲ್ಲಿ ಹರಿಜನ ಅಧ್ಯಾಪಕರೊಬ್ಬರ ಮೇಲೆ ಸವರ್ಣೀಯ ಗೂಂಡಾ ಪಡೆಯೊಂದು ಹಲ್ಲೆ ನಡೆಸಿ ಅವರ ಕೈಗಡಿಯಾರ ಹಾಗೂ 200 ರೂ. ದೋಚಿಕೊಂಡಿದೆ. ಈ ಅಧ್ಯಾಪಕರು ಕೇರಳ ಸರಕಾರೀ ಅಧ್ಯಾಪಕರ ಸಂಘದ ಉಪ ಜಿಲ್ಲಾ ಸಮಿತಿಯ ಅಧ್ಯಕ್ಷರು.

* ಸಿ. ಪಿ. ಐ. ಕಾರ್ಯಕರ್ತ ಥಾಮಸ್ ದೇವಾಸಿಮಾರವರ ಮೇಲೆ ಕೇರಳ ಕಾಂಗ್ರೆಸ್(ಜೆ) ಕಾರ್ಯಕರ್ತರು ಹಲ್ಲೆ ನಡೆಸಿದ್ದರಿಂದ ಅವರೀಗ ತಿರುವಳ್ಳ ಸರಕಾರೀ ಆಸ್ಪತ್ರೆಯಲ್ಲಿದ್ದಾರೆ.

ಇಷ್ಟೆಲ್ಲಾ ನಡೆಯುತ್ತಿರುವುದನ್ನು ಮರೆಮಾಚಲಕ್ಕೋ ಏನೋ ಕೇರಳದ ಗೃಹ ಮಂತ್ರಿಯವರ ಪಕ್ಷವಾದ ಆಂತೋಣಿ ಕಾಂಗ್ರೆಸ್ ರಾಜ್ಯ ಕಾರ್ಯಕಾರೀ ಸಮಿತಿಯು ಸಿ.ಪಿ.ಐ.(ಎಂ) ಹಿಂಸಾಚಾರ ನಡೆಸಿ ಸರಕಾರವನ್ನು ಉರುಳಿಸಲು ಪ್ರಯತ್ನಿಸುತ್ತಿದ್ದಾರೆಂದು ಬೊಬ್ಬಿಟ್ಟದೆ.

ಸಿ. ಪಿ. ಐ. (ಎಂ) ಅಥವಾ ಎಡ ಪ್ರಜಾಪ್ರಭುತ್ವ ರಂಗದ ಇತರ ಯಾವುದೇ ಪಕ್ಷಕ್ಕಾಗಲೀ ಪಕ್ಷಾಂತರ ಪ್ರಚೋದಿಸಿ ಅಲ್ಪಮತವನ್ನು ಬಹುಮತವಾಗಿ ಪರಿವರ್ತಿಸುವುದರಲ್ಲಿ ನಂಬಿಕೆಯಿಲ್ಲ ಎಂಬುದನ್ನು ಹಲವು ಬಾರಿ ಸ್ಪಷ್ಟವಾಗಿ ಹೇಳಿವೆ. ಆಂತೋಣಿ ಕಾಂಗ್ರೆಸ್‌ನ ಈ ಬೊಬ್ಬೆ ಕೇವಲ ಬಲಪಂಥೀಯ ಹಾಗೂ ಆರ್. ಎಸ್. ಎಸ್. ಗೂಂಡಾಗಳಿಗೆ ಮತ್ತಷ್ಟು ಕುಮ್ಮಕ್ಕು ಕೊಡಲಿಕ್ಕಾಗಿಯೆಂಬುದು ಇದರಿಂದ ಗೊತ್ತಾಗುತ್ತದೆ. ಅಲ್ಲದೆ ಮಂತ್ರಿ ಮಂಡಲ ರಚನೆಯ ಸಮಯದಲ್ಲಿ ಅಧಿಕಾರ ಹಂಚಿಕೊಳ್ಳುವಲ್ಲಿ ಆಂತೋಣಿ ಕಾಂಗ್ರೆಸ್‌ನ ಕೆಲವರಿಗೆ ಬಹಳ ನಿರಾಸೆಯಾಗಿದೆಯಂತೆ. ಇದೇ ರೀತಿ ಈ ಬಲಪಂಥೀಯ ರಂಗದ ಇದರ ಪಕ್ಷಗಳ ನಿರಾಶೆಗೊಂಡ ಗುಂಪುಗಳು ಮಂತ್ರಿ ಮಂಡಲಕ್ಕೆ ತೊಂದರೆ ಮಾಡದಿರಲಿ ಎಂಬ ಉದ್ದೇಶದಿಂದಲೂ ಈ ಕೂಗನ್ನೆಬ್ಬಿಸಿರಬಹುದೆಂದು ಕೆಲವರ ಅಂದಾಜು.

●

ಸೆಪ್ಟೆಂಬರ್ ೧ ರಂದು ಯುದ್ಧ ವಿರೋಧಿ ದಿನಾಚರಣೆ

(1ನೇ ಪುಟದಿಂದ)

1980 ರಲ್ಲಿ ಗುಂಡೂರಾವ್ ಸರಕಾರ ವಿಧಾನಸಭೆಯಲ್ಲಿ ಅಗತ್ಯ ಸೇವಾ ನಿರ್ವಹಣಾ ಬಿಲ್ಲನ್ನು ಮಂಡಿಸಲೆತ್ನಿಸಿದಾಗ ರಾಜ್ಯದ ಸಮಗ್ರ ಕಾರ್ಮಿಕ ವರ್ಗ ಸಿಡಿದೆದ್ದು 18-8-80 ರಂದು ಒಂದು ಸಾರ್ವತ್ರಿಕ ಮುಷ್ಕರ ಹೂಡಿದ್ದನ್ನೂ ನೆನೆದ ಕಾಂ|| ಸೂರಿಯವರು ಬೆಲೆ ಏರಿಕೆ ಎನ್. ಎಸ್. ಎ. ಮತ್ತು ಇ. ಎಸ್. ಎಂ. ಎ. ಗಳಂಥ ಕರಾಳ ಶಾಸನಗಳ ವಿರುದ್ಧ ಭಾರತದಾದ್ಯಂತ ಯಶಸ್ವಿಯಾಗಿ ನಡೆದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದಲ್ಲಿ ರಾಜ್ಯದ ಕಾರ್ಮಿಕರೂ ಪಾಲ್ಗೊಂಡ ಮುಷ್ಕರ ಯಶಸ್ವಿ ಮಾಡಿದನ್ನು ಜ್ಞಾಪಕಕ್ಕೆ ತಂದರು.

ಕೇಂದ್ರ ಸರಕಾರ, ಕಾಂಗ್ರೆ ನೇತೃತ್ವದ ರಾಜ್ಯ ಸರಕಾರಗಳು ಕಾರ್ಮಿಕ ವಿರೋಧಿ ಧೋರಣೆ ಅನುಸರಿಸುತ್ತಿದ್ದುದನ್ನು ಗಮನಕ್ಕೆ ತಂದ ಕಾಂ| ಸೂರಿಯವರು ಅನೇಕ ದೃಷ್ಟಾಂತಗಳನ್ನು ಉದಹರಿಸಿದರು.

ಆದರೆ ಎಡರಂಗ ನೇತೃತ್ವದ ಪ. ಬಂಗಾಲ ಮತ್ತು ತ್ರಿಪುರಾದ ಸರಕಾರಗಳು ಕಾರ್ಮಿಕ ವಿರೋಧಿ ಶಾಸನಗಳನ್ನು ಅನುಷ್ಠಾನಕ್ಕೆ ತರುವುದನ್ನು ವಿರೋಧಿಸಿದ್ದನ್ನು ಹೆಮ್ಮೆಯಿಂದ ತಿಳಿಸಿದ ಸೂರಿಯವರು ಈ ಸರಕಾರಗಳು ರಾಷ್ಟ್ರದ ಎಲ್ಲ ಪ್ರಜಾಪ್ರಭುತ್ವ ಪ್ರೇಮಿಗಳ ಆಶಾ ಕಿರಣಗಳಾಗಿವೆಯೆಂದರು. ಕಾಂಗ್ರೆ ಅನೇಕ ಬಗೆಯ ಕುತಂತ್ರ ನಡೆಸಿದರೂ ಪ. ಬಂಗಾಲದ ಜನತೆ ಮೇ 19 ರಂದು ನಡೆದ ಚುನಾವಣೆಯಲ್ಲಿ ಎಡರಂಗವನ್ನು ಮತ್ತೆ ಅಧಿಕಾರಕ್ಕೆ ತಂದುದು, ಎಡರಂಗ ಸರಕಾರದ ಜನಪ್ರಿಯತೆಗೆ ನಿದರ್ಶನ ಎಂದರು.

ಸಭೆಗೆ ಆಗಮಿಸಿದ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಮತ್ತೊಮ್ಮೆ ಹಾರ್ದಿಕ ಸ್ವಾಗತ ಬಯಸಿದ ಕಾಂ| ಸೂರಿಯವರು, ಕಾರ್ಯಕಾರಿ ಸಮಿತಿಯ ಸಭೆಗೆ ಬೆಂಗಳೂರನ್ನು ಆಯ್ಕೆಮಾಡಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದ್ದರು.

ನಂತರ ಸಿ.ಐ.ಟಿ.ಯು. ಕಾರ್ಯದರ್ಶಿಗಳಲ್ಲೊಬ್ಬರಾದ ಕಾಂ| ನೃಸಿಂಗ್ ಚಕ್ರವರ್ತಿ ಯವರು ಸಂತಾಪ ಸೂಚಕ ನಿರ್ಣಯ ಮಂಡಿಸಿದರು. ಬೇಲೂರಿನಲ್ಲಿ (ಆಗಸ್ಟ 1981) ಕಳೆದ ಸಲದ ಕಾರ್ಯಕಾರಿ ಸಮಿತಿಯ ಸಭೆಯಿಂದೀಚೆ ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಿ ಮೌನವನ್ನಾಚರಿಸಲಾಯಿತು. ಜೀವನವಿಡೀ ಜನಸಾಮಾನ್ಯರಿಗೋಸ್ಕರ ಅವಿರತ ಹೋರಾಡಿ ಅಗಲಿದ ಸಿ. ಪಿ. ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾಂ| ಬಾಲಸುಬ್ರಮಣ್ಯಂ, ಸಿ.ಪಿ ಐ.(ಎಂ) ಕೇಂದ್ರ ಸಮಿತಿ ಸದಸ್ಯ ಕಾಂ|ಜೈಪಾಲ್ ಸಿಂಗ್, ಲೋಕಸಭಾ ಸದಸ್ಯ ಕಾಂ| ಜ್ಯೋತಿರ್ಮಯಿ ಬಸು, ಮಹಿಳಾ ಸಂಘಟನೆಯ ಮುಖಂಡೆ ಪಂಕಜ ಆಚಾರ್ಯ ಇವರಿಗೆಲ್ಲ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಂತರ ಕಾಂ| ಬಿ ಟಿ ಆರ್. ಅವರು ಸಭೆಯನ್ನುದ್ದೇಶಿಸಿ ಮಾತನಾಡಿ ಇತ್ತೀಚಿನ ರಾಜಕೀಯ ಬೆಳವಣಿಗೆಗಳನ್ನು ವಿಶ್ಲೇಷಿಸಿದರು. ದಿನದಿಂದ ದಿನಕ್ಕೆ ಸರ್ವಾಧಿಕಾರದತ್ತ ವಾಲುತ್ತಿರುವ ಕಾಂಗ್ರೆ ನೇತೃತ್ವದ ಸರಕಾರದ ಧೋರಣೆಗಳ ಬಗ್ಗೆ ಕಾರ್ಮಿಕರನ್ನು ಎಚ್ಚರಿಸಿದರು. ಸರ್ವಾಧಿಕಾರಿ ಶಕ್ತಿಗಳಿಗೆ ಸವಾಲನ್ನೊಡ್ಡುವ ಕಾರ್ಮಿಕ ವರ್ಗದ ಮೇಲೆ ನಿರಂತರ ಪ್ರಹಾರ ನಡೆಯುತ್ತಿರುವುದನ್ನು ಎತ್ತಿ ತೋರಿಸಿದ ಕಾಂ| ಬಿ. ಟಿ. ಆರ್. ಈ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಧೀರ ಐಕ್ಯ ಕಾರ್ಯಾಚರಣೆಗೆ ಮುಂದಾಗುವಂತೆ ಕರೆ ನೀಡಿದರು.

ಜಾಗತಿಕ ಶಾಂತಿಗೆ ಗಂಡಾಂತರವನ್ನೊಡ್ಡಿರುವ ಸಾಮ್ರಾಜ್ಯಶಾಹಿ ಯುದ್ಧಖೋರ ನೀತಿಯ ಬಗ್ಗೆ ಗಮನ ಸೆಳೆದ ಕಾಂ| ಬಿ. ಟಿ. ಆರ್. ನ್ಯೂಕ್ಲಿಯರ್ ಶಸ್ತ್ರಗಳ ಭಯಂಕರತೆಯ ಕುರಿತು ಜನತೆಗೆ ಮನದಟ್ಟು ಮಾಡಲು ಶ್ರಮಿಸಬೇಕೆಂದು ಕರೆ ನೀಡಿದರು. WFTU ನೀಡಿದ ಕರೆಯನ್ವಯ ಸೆಪ್ಟೆಂಬರ್ 1 ರಂದು ಯುದ್ಧ ವಿರೋಧಿ ದಿನಾಚರಣೆಯನ್ನು ಯಶಸ್ವಿ ಮಾಡುವಂತೆ ಮನವಿ ಮಾಡಿದರು. (ಕಾಂ| ಬಿ. ಟಿ. ಆರ್. ಅವರ ಭಾಷಣದ ಪೂರ್ತಿ ವಿವರವನ್ನು ಮುಂದಿನವಾರ ಪೂರ್ತಿ ಪ್ರಕಟಿಸಲಾಗುವುದು).

ಅಖಿಲ ಭಾರತ ಸಿ. ಐ ಟಿ ಯು. ಕಾರ್ಯಕಾರಿ ಸಮಿತಿಗೆ ಪ. ಬಂಗಾಲ ಮುಖ್ಯ ಮಂತ್ರಿ ಕಾಂ| ಜ್ಯೋತಿ ಬಸು, ಕಾಂ| ಸಮರ ಮುಖರ್ಜಿ, ಬಾಲಾನಂದನ್ ಮೊದಲಾದ ಮುಖಂಡರು ಆಗಮಿಸಿದ್ದಾರೆ. ನಗರದ ದೇವಾಂಗ ಸಂಘ ಸಭಾಂಗಣದಲ್ಲಿ ಸಭೆ ನಡೆಯುತ್ತಲಿದೆ.

ಪೂರ್ವ ಸಿದ್ಧತೆಗಳು:

ಸಿ.ಐ ಟಿ.ಯು. ರಾಜ್ಯ ಸಮಿತಿಯ ಅಧ್ಯಕ್ಷ ಕಾಂ| ಸೂರ್ಯನಾರಾಯಣರಾವ್ ಅವರ ನೇತೃತ್ವದಲ್ಲಿ ರಚಿತಗೊಂಡ ಸ್ವಾಗತ ಸಮಿತಿಯು ಕಾರ್ಯಕಾರಿ ಸಮಿತಿಯ ಸಭೆ ಯಶಸ್ವಿಯಾಗುವಂತೆ ಮಾಡಲು ಎಲ್ಲಾ ಪೂರ್ವ ಸಿದ್ಧತೆಗಳನ್ನು ಕೈಕೊಂಡಿದೆ.

ನಗರದ ನಾನಾ ಭಾಗಗಳಲ್ಲಿ ರಚಿತಗೊಂಡ ಉಪಸಮಿತಿಗಳ ನೇತೃತ್ವದಲ್ಲಿ, ಕಾರ್ಯಕಾರಿ ಸಮಿತಿಯ ಸಭೆಗೆ ಶುಭ ಕೋರುವ, ಕೇಂದ್ರ ನಾಯಕರುಗಳಿಗೆ ಹಾರ್ದಿಕ ಸ್ವಾಗತ ನೀಡುವ ಗೋಡೆ ಬರೆಹಗಳು ಎಲ್ಲೆಲ್ಲೂ ಕಂಗೊಳಿಸುತ್ತಿವೆ.

ಸಿ ಐ ಟಿ.ಯು.ಗೆ ಸೇರ್ಪಡೆಯಾಗಿರುವ ಸಂಘಗಳಿರುವ ಎಲ್ಲಾ ಕಾರ್ಖಾನೆಗಳೆದುರು 15-7-82 ರಿಂದಲೇ ಕೆಂಬಾವುಟ ಹಾರಾಡುತ್ತಿವೆ. ಸ್ವಾಗತ ಸಮಿತಿಯು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಕರಪತ್ರಗಳನ್ನು, ಬಿತ್ತಿ ಪತ್ರಗಳನ್ನು ಪ್ರಕಟಿಸಿ ನಗರಾದ್ಯಂತ ವಿತರಣೆ ಮಾಡಿತ್ತು.

15-7-82 ರಿಂದ ನಗರದ ಮೈಸೂರು ರೋಡ್, ಕೆ.ಆರ್.ಪುರಂ, ಐ.ಟಿ.ಐ, ಯಶವಂತಪುರ, ನಗರ (City) ಪ್ರದೇಶ, ಶ್ರೀರಾಂಪುರ ಮುಂತಾದ ಕಡೆ ಬಹಿರಂಗ ಸಭೆಗಳನ್ನೇರ್ಪಡಿಸಿ ನಾಗರಿಕರಿಗೆ ವಿಷಯಗಳನ್ನು ತಿಳಿಯಪಡಿಸಲಾಗಿತ್ತು. ಮನೆ ಮನೆಗೂ ಸಿ. ಐ. ಟಿ. ಯು. ಸಂದೇಶ ತಲುಪಿಸುವ ಕಾರ್ಯ ಕಾರ್ಮಿಕ ಬಡಾವಣೆಗಳಲ್ಲಿ ಜೋರಾಗಿತ್ತು.

ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್‌ನ ಚಾಲಕ ಸಂಗಾತಿಗಳು ತಮ್ಮ ತಮ್ಮ ಆಟೋಗಳ ಮೇಲೆ ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿಗೆ ಶುಭ ಕೋರುವ ಅಂಟು ಚೀಟಿ (ಸ್ಟಿಕರ್ಸ್) ಅಂಟಿಸಿದ್ದರಲ್ಲದೇ 3-4 ದಿನ ತಮ್ಮ ವಾಹನಗಳೊಂದಿಗೆ ಬಂದು ಕಾರ್ಯನಿರ್ವಹಿಸಿದರು.

ನಗರದಲ್ಲೆಲ್ಲ ಅಂದವಾಗಿ ಬರೆದಿರುವ ಬ್ಯಾನರ್‌ಗಳು ದಾರಿ ಹೋಕರನ್ನು ಆಕರ್ಷಿಸುತ್ತಿವೆ. ವಿಮಾನ ನಿಲ್ದಾಣದ ಪ್ರದೇಶ, ರೈಲು ನಿಲ್ದಾಣ, ಸಭೆ ನಡೆದಿರುವ ದೇವಾಂಗ ಸಂಘದ ಸುತ್ತಮುತ್ತಲ ಪ್ರದೇಶಗಳು ಬ್ಯಾನರ್‌ಗಳಿಂದ, ಬಾವುಟಗಳಿಂದ, ಕೆಂಪು ತೋರಣಗಳಿಂದ ಅಲಂಕರಿತಗೊಂಡಿವೆ.

ಪ್ರಮುಖ ಬೀದಿಗಳಲ್ಲಿ ಸ್ವಾಗತ ಕಮಾನುಗಳನ್ನು ರಚಿಸಲಾಗಿದೆ. ಬೀದಿಗಳಲ್ಲಿ ಸ್ವಯಂ ಸೇವಕರು ಹಣ ಸಂಗ್ರಹಿಸಿದ್ದಾರೆ. ಎಲ್ಲ ಕಾರ್ಮಿಕ ಸಂಘಗಳೂ ನೆರವು ನೀಡಿವೆ. ಸ್ವಯಂ ಸೇವಕರನ್ನು ಒದಗಿಸಿವೆ.

ವಿವಿಧ ವಿಭಾಗಗಳ ಒಟ್ಟು 500 ಸ್ವಯಂ ಸೇವಕರು ಕಾರ್ಯ ನಿರತರಾಗಿದ್ದಾರೆ.

ದಿನಾಂಕ 25 ರಂದು ಶೇಷಾದ್ರಿಪುರಂನ ನೆಹರೂ ಪಾರ್ಕ್‌ನಲ್ಲಿ ನಡೆಯಲಿರುವ ಬಹಿರಂಗ ಸಭೆಯನ್ನು ಅಭೂತಪೂರ್ವವೆನ್ನುವಂತೆ ನಡೆಸಲು ಕಾರ್ಯಕರ್ತರು ಶ್ರಮಿಸುತ್ತಿದ್ದಾರೆ.

ಬಹಿರಂಗ ಸಭೆಗೆ ಕೆ. ಜಿ. ಎಫ್. ಮುಂತಾದ ಸ್ಥಳಗಳಿಂದ ಸಂಗಾತಿಗಳು ಆಗಮಿಸಲಿದ್ದಾರೆ. ಭಾರೀ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಇಂದು ಬೆಳಗ್ಗೆ ದೇವಾಂಗ ಸಂಘದಲ್ಲಿ ಕೆಂಪು ಶರ್ಟ್‌ಗಳನ್ನು ತೊಟ್ಟ ಸ್ವಯಂ ಸೇವಕರು ಬಳಲಿದ್ದರೂ ಲವಲವಿಕೆಯಿಂದ ಓಡಾಡುತ್ತ ಕಾರ್ಯ ನಿರ್ವಹಿಸುತ್ತಿರುವುದು, ಮಾರ್ಗ ದರ್ಶನ ನೀಡುತ್ತಿರುವುದು ಕಂಡು ಬಂದಿತು.

[ಬಹಿರಂಗ ಸಭೆ ಮತ್ತಿತರ ವಿವರ ಮುಂದಿನ ವಾರ]

ಹಸಿದ ಕಣ್ಗಳಿಂದ

ಹಿಂದುಳಿದವರ ಹೋರಾಟ

ಶತಮಾನಗಳಿಂದಲೂ ಬಂಡವಾಳಶಾಹಿಗಳ ಕಾಲಡಿಯಲ್ಲಿ ಸಿಕ್ಕಿ ಮಣ್ಣಾಗುತ್ತಿರುವ ಈ ದೇಶದ ಹಿಂದುಳಿದವರ ಹೋರಾಟ ಬರೀ ಹೋರಾಟವಾಗಿಯೇ ಉಳಿಯುತ್ತಿದೆ. ಆಳುವ ಪಕ್ಷದ ಮೂರ್ಖ ಮಂತ್ರಿ, ಶಾಸಕರು ಹಿಂದುಳಿದವರ ಹೆಸರಿನ ಮೇಲೆ, ಬಡವರ ಬೆನ್ನಿನ ಮೇಲೆ ಚಿನ್ನದ ಸಿಂಹಾಸನವಿಟ್ಟು ತಮ್ಮ ಸ್ವಾರ್ಥ ಸಾಧನೆಯ ಹಾದಿಯಲ್ಲಿ ದಿನದೂಡುತ್ತಿದ್ದಾರೆ.

ದೀನ-ದಲಿತರ ಬದುಕಿಗೆ ಬೆಂಕಿ ಹಚ್ಚಿ ನೋಡುವ ಈ ರಾಜಕಾರಣಿಗಳು, ಅವರ ಸಮಾಧಿಗಳ ಮೇಲೆ ಗಾಂಧಿ, ಅಂಬೇಡ್ಕರರ ಪ್ರತಿಮೆಗಳನ್ನು ನಿಲ್ಲಿಸಿ ದಲಿತರ ಬಗ್ಗೆ ಕಣ್ಣೀರು ಸುರಿಸುತ್ತಾರೆ. ಇವರ ಕಪಟ ಕಣ್ಣೀರಿನಲ್ಲಿ ಹೊಳೆಯಾಗಿ ಹರಿವ ಹಿಂದುಳಿದವರ ಹೋರಾಟ ಬರೀ ರಾಜಕಾರಣಿಗಳ ಬಾಯಿ ಮಾತುಗಳಲ್ಲಿ ಉಳಿಯುತಿದೆ. ದಿನ ನಿತ್ಯ ಈ "ಹಿಂದುಳಿವಿಕೆ" ಮುಂದೆ ಬೆಳೆಯುತ್ತಲೇ ಹೋಗುತಿದೆ. ಆದರೆ ಬಡವರ ಕೈಗೆ "ಬದುಕಿನ ಸಿಂಹಾಸನ" ಬರುವವರೆಗೆ ಹಿಂದುಳಿದವರ, ದಲಿತರ ಹೋರಾಟ ಬರೀ ನಮ್ಮ ಕನಸಿನ, ಕಾವ್ಯದ ವಸ್ತುವಾಗಿಯೇ ಉಳಿಯುವುದೇನು...?

ಅಲ್ಲೂ ಸಲ್ಲದವರು....?

ಅಲ್ಲೂ ಸಲ್ಲದವರು; ಇಲ್ಲೂ ಸಲ್ಲದವರು ನಮ್ಮ ಸರಕಾರಿ ಅಧಿಕಾರಿಗಳು. ಇವರ ಕೈಗೆ ಅಧಿಕಾರ ಬಂದರೆ ಸಾಕು, ಮೂರ್ಖ ತುಘಲಕನ ವಂಶದವರಾಗುತ್ತಾರೆ. ರೈತ, ಕಾರ್ಮಿಕರ, ಸಾಮಾನ್ಯ ಜನರ ರಕ್ತ ಹೀರುವ ಈ ಜನ ಅಧಿಕಾರಕ್ಕಾಗಿ, ಅಧಿಕಾರದ ಅಮಲಿಗಾಗಿ ಏನು ಮಾಡಲೂ ಸಿದ್ಧ.

ಇಂಥಾ ಅಧಿಕಾರಿಗಳು ನಮಗೆ ಎಲ್ಲಾ ಕಡೆ, ಎಲ್ಲಾ ಕ್ಷೇತ್ರಗಳಲ್ಲೂ ಸಿಗುತ್ತಾರೆ. ತಹಸೀಲ ಆಫೀಸ್‌ಗೆ ಹೋಗಿ ಅಲ್ಲಿ ರೈತರ ರಕ್ತ ಹೀರುವ ಅಧಿಕಾರಿಗಳು; ರಕ್ಷಣೆ ಪಡೆಯಲು ಪೋಲಿಸ್ ಠಾಣೆಗೆ ಹೋಗಿ ಅಲ್ಲಿ ಹಣ ಕೀಳುವ ಕಳ್ಳರು, ಕೆಲಸಕ್ಕಾಗಿ ಸರಕಾರಿ ಆಫೀಸ್‌ಗಳಿಗೆ ಹೋಗಿ ಅಲ್ಲಿ ಹಣಕ್ಕಾಗಿ ಬಾಯಿಬಿಡುವ ಕಪ್ಪೆಗಳು. ಕೊನೆಗೆ ನ್ಯಾಯ ಪಡೆಯಲು ನ್ಯಾಯಾಲಯಕ್ಕೆ ಹೋಗಿ ಅಲ್ಲೂ ಮಂತ್ರಿ ಶಾಸಕರ ಗುಲಾಮರನ್ನು ಕಾಣುತ್ತೇವೆ. ಇಡೀ ವ್ಯವಸ್ಥೆ ಭ್ರಷ್ಟ ಬುನಾದಿಯ ಮೇಲೆ ರೂಪುಗೊಂಡಿದೆ.

ಹೆಣ್ಣಿನ ಬಗ್ಗೆ ಕಣ್ಣೀರು !

"ಪವಿತ್ರ ಭಾರತದ ದೇಶದ ಹೆಣ್ಣು ಮಣ್ಣಿನಷ್ಟೇ ಪವಿತ್ರ" ಎಂದು ಹಾಡುವ ಜನ, ಹೆಣ್ಣನ್ನು ನೋಡುವುದು ಅಷ್ಟೇ ವಿಭಿನ್ನ ಹಾಗೆಂದು ಈ ದೇಶದಲ್ಲಿ ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರ, ವರದಕ್ಷಿಣೆಗಾಗಿ ನಡೆಯುವ ಕೊಲೆಗಳಿಗೆ ಕೊನೆಯಿಲ್ಲ. ಪಶುಗಳಂತೆ ಅರಬ್ ರಾಷ್ಟ್ರಗಳಿಗೆ ಹೆಣ್ಣನ್ನು ಮಾರುವ ಪವಿತ್ರ ಕಾರ್ಯ ನಮ್ಮಲ್ಲಿ ಇಂದಿಗೂ ಪ್ರಗತಿಯಿಂದ ಸಾಗಿದೆ. ಕೆಂಪು ದೀಪಗಳ ಕೆಳಗೆ ಕಣ್ಣೀರು ಹಾಕುವ ಹೆಣ್ಣುಗಳ ಕತೆ ನಮ್ಮವರಿಗೆ ಬೇಕಾಗಿಲ್ಲ. ದಿನನಿತ್ಯ ಅವಳ ಮೇಲೆ ಅತ್ಯಾಚಾರ, ಅನ್ಯಾಯ ನಡೆದರೂ, ಈ ದೇಶದ ಸಂಸ್ಕೃತಿಯಲ್ಲಿ ಹೆಣ್ಣು ಅಷ್ಟೇ ಪವಿತ್ರಳು.

— ಕಲಾಲ್

ಸಂಪಾದಕೀಯ

(1ನೇ ಪುಟದಿಂದ)

ದೇಶದ ಎಲ್ಲಾ ಪ್ರಜಾಪ್ರಭುತ್ವವಾದಿಗಳೂ, ಲಂಚ ರುಷುವತ್ತಿನ ವಿರುದ್ಧ ಹೋರಾಡುತ್ತಿರುವ ದೇಶ ಪ್ರೇಮಿಗಳೂ ತೀವ್ರವಾಗಿ ಆಲೋಚಿಸಬೇಕಾದ ಘಟನೆಯಿದು.

ಸಂಸತ್ತಿನ ಗೌರವ ಘನಸ್ತಿಕೆಯನ್ನು ಕೊರೆಯುತ್ತಾ ಹೋಗಿ ಕೊನೆಗೆ ಒಂದು ದಿನ ಏಕಾಏಕಿಯಾಗಿ ಅಧ್ಯಕ್ಷೀಯ ವ್ಯವಸ್ಥೆಯನ್ನು ತರಬೇಕೆನ್ನುವ ಸರ್ವಾಧಿಕಾರಿಗಳ ಕಾರ್ಯ ತಂತ್ರ ಇದು ಎನ್ನುವುದರಲ್ಲಿ ಏನೂ ಸಂಶಯವಿಲ್ಲ.

ರಾಜ್ಯ ಸಭೆಯಲ್ಲಿ ಶ್ರೀ ಹಿದಾಯತುಲ್ಲಾರವರು 'ಈ ಪ್ರಶ್ನೆಯು ರಾಜ್ಯ ಸಭೆಯ ಸದಸ್ಯರ ಹಕ್ಕು ಬಾಧ್ಯತೆಗಳಿಗೆ ಬಾಧಕವಾಗಿಲ್ಲ'ವೆಂದು ಕೊಟ್ಟ ನಿರ್ದೇಶನವಾಗಲೀ, ಲೋಕ ಸಭೆಯಲ್ಲಿ ಶ್ರೀ ಬಲರಾಮ ಝಾಖಡ್ ಅವರು ಕೊಟ್ಟ ಸೀಮಿತಾರ್ಥದ ನಿರ್ದೇಶನವಾಗಲೀ ಒಟ್ಟಿನಲ್ಲಿ ಸಂಸತ್ತಿನ ಉಭಯ ಸದನಗಳು ಉತ್ತಮ ಪರಂಪರೆಯನ್ನು ಎತ್ತಿ ಹಿಡಿಯುವಂತಹ ನಿರ್ದೇಶನಗಳಲ್ಲವೆಂದು ಮಾತ್ರ ನಾವು ಹೇಳ ಬಯಸುತ್ತೇವೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore 560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.